## ಧಾರವಾಡದಲ್ಲಿ ಇಸವಿಯ ಕೃಷಿ ವಿಶ್ವವಿದ್ಯಾನಿಲಯದ (ತಿದ್ದುಪಡಿ) ವಿಧೇಯಕ

### ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ಧಾರವಾಡದಲ್ಲಿ ಇಸವಿಯ ಕೃಷಿ ವಿಶ್ವವಿದ್ಯಾನಿಲಯದ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು,—ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಶ್ರೀ ಎಂ. ಪ್ರಕಾಶ್ —ಮಾನ್ಯ ಅಧ್ಯಕ್ಷರೇ, ಬಹಳ ವರ್ಷಗಳಿಂದ ಇದ್ದಂಥ ಈ ಬೇಡಿಕೆಯ ಬಗ್ಗೆ, ಕಳೆದ ವರ್ಷ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಪ್ರಕಟಣೆ ಮಾಡಿದ್ದರು. ಆಲ್ಲಿರತಕ್ಕಂಥ ಭೌಗೋಳಿಕ ಪರಿಸರವನ್ನು ಕುರಿತಾಗಿಯೂ ಮತ್ತು ದಕ್ಷಿಣ ಕರ್ನಾಟಕದ ಕೃಷಿಕರಿಗೆ ಅನುಕೂಲವಾಗಲೀ ಎನ್ನುವ ಕಾರಣಕ್ಕಾಗಿ, ಆ ವ್ಯಾಪ್ತಿಯಲ್ಲಿ ಬರತಕ್ಕಂಥ ೮ ಜಿಲ್ಲೆಗಳ ನಡುವೆ, ೬ ಬೋಧನಾ ಕ್ರಮಗಳು ಇರುವ ಶಾಲೆಗಳಿಗೂ ಮತ್ತು ಸುಮಾರು ೪೪ ನಾವರ್ಗಳ ಬಗ್ಗೆ ಆಗಿರತಕ್ಕಂಥ ಸಂಶೋಧನೆ ಕುರಿತು, ದಕ್ಷಿಣ ಕರ್ನಾಟಕದ ಕೃಷಿಕರಿಗೆ, ವಿಶ್ವವಿದ್ಯಾನಿಲಯಗಳ ಪ್ರಯೋಗಾಲಯಗಳಲ್ಲಿ ಆಗಿರುವಂಥ ಪ್ರಗತಿ ಯನ್ನು ಕುರಿತು, ಅವುಗಳನ್ನು ರೈತರಮಟ್ಟಕ್ಕೆ ತೆಗೆದುಕೊಂಡು ಹೋಗುವುದಕ್ಕೆ, ಹೆಚ್ಚು ಕೃಷಿಯಲ್ಲಿ ಕ್ರಾಂತಿಕಾರವಾದ ಬದಲಾವಣೆ ಆಗಬೇಕೆನ್ನುವ ಕಾರಣಗಳಿಗಾಗಿ ಈ ವಿಧೇಯಕವನ್ನು ತರಲಾಗಿದೆ. ಇದು ಬಹಳ ವರ್ಷಗಳಿಂದ ಅಂದರೆ, ಧಾರವಾಡದಲ್ಲಿ, ಹಿಂದೆ ಕೃಷಿ ಸಚಿವರಾಗಿದ್ದ ಮಾನ್ಯ ಕೆ. ಹೆಚ್. ಪಾಟೀಲರು ಇದ್ದಾಗ, ಇದರ ಬಗ್ಗೆ ಮಂಜರಾತಿ ಆಗಿದ್ದರೂ, ಕೂಡ ಕಾರಣಾಂತರಗಳಿಂದ ಆಗ ಆಗದೇ ಹೋದುದರಿಂದ, ಈ ಕೃಷಿ ವಿಶ್ವವಿದ್ಯಾನಿಲಯವನ್ನು ಇದೇ ಶೈಕ್ಷಣಿಕ ವರ್ಷದಿಂದ ಪ್ರಾರಂಭ ಮಾಡಬೇಕೆನ್ನುವ ಉದ್ದೇಶದಿಂದ ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದೇವೆ. ಇದರಲ್ಲಿ ಕೆಲವೊಂದು ಮುಖ್ಯ ಅಂಶಗಳು ಇಷ್ಟೆ, ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡ ತಕ್ಕಂಥದ್ದು, ಆ ವ್ಯಾಪ್ತಿಗೆ ಸುಮಾರು ೮ ಜಿಲ್ಲೆಗಳು ಎಂದರೆ, ಮುಂಬೈ ಕರ್ನಾಟಕದಲ್ಲಿರತಕ್ಕಂಥ, ಉತ್ತರ ಕನ್ನಡ ಜಿಲ್ಲೆ ಬೆಳಗಾಂ, ಧಾರವಾಡ ಮತ್ತು ಬಿಜಾಪುರ ಮತ್ತು ಗುಲ್ಬರ್ಗಾ ವಿಭಾಗದಲ್ಲಿ ಬರತಕ್ಕಂಥ ಬೀದರ್, ಗುಲ್ಬರ್ಗಾ, ರಾಯಚೂರು ಮತ್ತು ಬಳ್ಳಾರಿ, ಈ ೮ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರತಕ್ಕಂಥ ಪ್ರದೇಶಗಳಲ್ಲಿ, ಅಲ್ಲಿರುವಂಥ ಎಲ್ಲಾ ಕಾಲೇಜುಗಳು, ಮತ್ತು ಅಲ್ಲಿರುವಂಥ ಎಲ್ಲಾ ಫಾರಂ ಗಳನ್ನೂ ಕೂಡಲೇ ಇದಕ್ಕೆ ವರ್ಗಾಯಿಸತಕ್ಕಂಥದ್ದು. ಅಲ್ಲಿ ಕೆಲಸ ಮಾಡತಕ್ಕಂಥ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಈ ವ್ಯಾಪ್ತಿಗೆ ಬರಬೇಕೆಂದಿದ್ದರೆ, ಬೆಂಗಳೂರಿನ ಹೆಬ್ಬಾಳದ ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಅವರು ಬರುವುದಕ್ಕೆ ಇಷ್ಟಪಟ್ಟಿರೆ, ಅದರ ಬಗ್ಗೆ ಪರ್ಯಾಲೋಚನೆ ಮಾಡಬೇಕು ಮತ್ತು ಹಣಕಾಸಿನ ವಿಚಾರದಲ್ಲಿಯೂ ಸಹ ಈ ವಿಶ್ವವಿದ್ಯಾನಿಲಯಕ್ಕೆ ಹಣ ಹಂಚಬೇಕಾಗಿದೆ. ಈ ಕುರಿತು, ಈ ಒಂದು ವಿಧೇಯಕವನ್ನು ತಂದಿದ್ದೇವೆ. ದಯವಿಟ್ಟು ಈ ಸದನ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಸಭಾಧ್ಯಕ್ಷರೇ, ಈ ವಿಷಯ ಸದನದ ಎಲ್ಲಾ ಸದಸ್ಯರ ಒಪ್ಪಿಗೆಗೆ ಪಾತ್ರವಾದ ವಿಷಯ. ಮಾನ್ಯ ವ್ಯವಸಾಯ ಸಚಿವರು ಈ ಮಸೂದೆಯನ್ನು ತಡವಾದರೂ ಈಗ ತಂದಿದ್ದಾರೆ, ಸ್ವಾಗತ. ಅನೇಕ ಜನಗಳಿಗೆ ಇನ್ನೂ ಇದರ ಬಗ್ಗೆ ಜಿಜ್ಞಾಸೆ ಇದೆ. ಧಾರವಾಡ ಅಗ್ರಿಕಲ್ಚರಲ್ ಯೂನಿವರ್ಸಿಟಿ ಪ್ರಾರಂಭ ಇತ್ತೀಚೆಗೆ ಆಗಿದೆಯೋ ಏನೋ ಎಷ್ಟು ವ ಭಾವನೆ ಜನರ ಮನಸ್ಸಿನಲ್ಲಿ ಬರುತ್ತಿದೆ: ಆದರೆ ಇದು ಸತ್ಯವಾದುದಲ್ಲ. ೧೯೬೨ರಲ್ಲಿ ಯು.ಎಸ್.ಐ. ಕಮಿಟಿಯವರು, ಮೈಸೂರು ರಾಜ್ಯದ ಸಲುವಾಗಿ ಒಂದು ವರದಿಯನ್ನು ಕೊಟ್ಟರು. ಆ ವರದಿ ಯನ್ನು ಕೊಟ್ಟಾಗ, ಎರಡು ಅಗ್ರಿಕಲ್ಚರಲ್ ಯೂನಿವರ್ಸಿಟಿಗಳ ಅವಶ್ಯ ಇಲ್ಲಿ ಇದೆ, ಒಂದು ಹೆಬ್ಬಾಳ ದಲ್ಲಿ, ಇನ್ನೊಂದು ಧಾರವಾಡದಲ್ಲಿ ಎಂದು ಅಂದೇ ಮಾಡಿದ್ದಾರೆ. ಎರಡು ಯೂನಿವರ್ಸಿಟಿಗಳೂ ಆಗುವುದಕ್ಕೆ ಹಣದ ಅಭಾವವಾಗಲೀ, ಆರ್ಥಿಕ ತಾಂತ್ರಿಕ ಅಭಾವವಾಗಲೀ ಬರಲಿಲ್ಲ. ೧೯೬೨ಕ್ಕೆ ಪೂರ್ವದಲ್ಲಿ, ಅಂದು ಮುಂಬೈ ಪ್ರದೇಶದಲ್ಲಿ ಧಾರವಾಡ ಇದ್ದಾಗ, ಮಾನ್ಯ ದಿವಂಗತ ಎಂ. ಪಿ. ಪಾಟೀಲರು ಮತ್ತು ಕೆ. ಎಸ್. ಪಾಟೀಲರು ಮತ್ತು ಅನೇಕ ಹಿರಿಯರು ಪ್ರಯತ್ನ ಮಾಡಿ ಧಾರವಾಡ ದಲ್ಲಿ ಅಗ್ರಿಕಲ್ಚರ್ ಕಾಲೇಜು ಮಾಡಿದರು. ಎಂ. ಪಿ. ಪಾಟೀಲರು, ಅಗ್ರಿಕಲ್ಚರ್ ಕಾಲೇಜು, ಅಗ್ರಿ ಕಲ್ಚರ್ ಯೂನಿವರ್ಸಿಟಿ ಆಗಬೇಕೆಂದು ಬಹಳ ಪ್ರಯತ್ನಿಸಿದರು, ದುರಾದೃಷ್ಟವಶಾತ್ ಆಗಲಿಲ್ಲ. ೧೯೬೩ನೇ ಇಸವಿಯಲ್ಲಿ ಯೂನಿವರ್ಸಿಟಿ ಆಕ್ಟ್ ಆದಾಗ, ಹೆಬ್ಬಾಳದಲ್ಲಿ ಒಂದು ಯೂನಿವರ್ಸಿಟಿ

ಆಯಿತು. ಧಾರವಾಡದ ಅಗ್ರಿಕಲ್ಚರ್ ಕಾಲೇಜ್ ಯಾವುದೇ ರೀತಿಯಲ್ಲೂ ಕಡಿಮೆ ಇಲ್ಲದಂತೆ ನಡೆದು ಕೊಂಡು ಬಂತು. ಇವೊತ್ತು ಅಗ್ರಿಕಲ್ಚರ್ ಯೂನಿವರ್ಸಿಟಿ ಉಳಿದ ಯೂನಿವರ್ಸಿಟಿಗಳಂತಲ್ಲ ಈಗ ಈ ಯೂನಿವರ್ಸಿಟಿ ಹೊಸದಾಗಿ ಆಗುತ್ತಿದೆಯೆಂದು ಜನಗಳಿಗೆ ಬೇಜಾರು ಆಗುತ್ತಿದೆ. ಕಾರಣ ಏನೆಂದರೆ, ಎಲ್ಲಾ ಯೂನಿವರ್ಸಿಟಿಗಳಲ್ಲೂ ಜಾತೀಯತೆ ಬಹಳಷ್ಟು ತಾಂಡವವಾಡುತ್ತಿದೆ. ವೈಸ್‌ಚಾನ್ಸ್‌ಲರ್‌ನಿಂದ ಹಿಡಿದು, ಪ್ರೊಫೆಸರ್, ಲೆಕ್ಚರರ್‌ವರೆಗೆ ಯಾವ ಯಾವ ಜಾತಿಯವರು ಇದ್ದಾರೆಂದು ಕೇಳಿದರೆ, ಮನೋವೇದನೆಯಾಗುತ್ತದೆ. ಇದರಿಂದ ನಿಜವಾಗಿಯೂ ಅನೇಕ ಸುಶಿಕ್ಷಿತ ಜನರಿಗೆ ಬೇಜಾರು ಆಗುತ್ತದೆ. ಯಾವುದೇ ರೀತಿಯ ಜ್ಞಾನಿಯಾಗದವರು, ಯೋಗ್ಯತೆ ಇಲ್ಲದಂತಹವರು ಮಾತ್ರ ಜಾತೀಯ ಆಧಾರವನ್ನು ಅನುಸರಿಸಿ, ಇಲ್ಲಸಲ್ಲದ ನಡುವಳಿಕೆಗಳನ್ನು ಮಾಡಿಕೊಂಡು ಈ ಹುದ್ದೆಗೆ ಬರುತ್ತಾರೆ. ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ ಜಾತೀಯ ಸಮಸ್ಯೆ ಬರುವುದಿಲ್ಲ. ಇಲ್ಲಿ ವ್ಯವಸಾಯ ವನ್ನು ಯಾರು ಮಾಡುತ್ತಾರೆ ಅವರೆಲ್ಲರೂ ಒಂದೇ ಜಾತಿ. ಅವರು ಎಸ್. ಸಿ ಇರಲಿ, ಬ್ಯಾಕ್‌ವರ್ಡ್ ಕ್ಲಾಸ್ಸ್ ಇರಲಿ, ಲಿಂಗಾಯಿತರು ಇರಲಿ, ರೆಡ್ಡಿ ಇರಲಿ, ಒಕ್ಕಲಿಗರು ಇರಲಿ, ಎಲ್ಲರೂ ಕರ್ಮಯೋಗಿಗಳು. ಇದು ಕರ್ಮಯೋಗಿಗಳ ಕ್ಷೇತ್ರ. ಕರ್ಮ ಯೋಗಿಗಳನ್ನು ಕರ್ಮಸಿದ್ಧರನ್ನಾಗಿ ಮಾಡಿ, ಅದರಿಂದ ಪೂರ್ಣಪ್ರಯೋಜನವನ್ನು ಲಭ್ಯ ಮಾಡುವುದೇ ಅಗ್ರಿಕಲ್ಚರ್ ಯೂನಿವರ್ಸಿಟಿಯ ಮುಖ್ಯವಾದ ಧೋರಣೆ ಉಳಿದ ಯೂನಿವರ್ಸಿಟಿಗಳು ಕೇವಲ ಫಲಕಗಳನ್ನು ಕೊಟ್ಟು, ನೌಕರಿಗಾಗಿ ಅವನು ಭಿಕ್ಷೆ ಬೇಡುವುದಕ್ಕೆ ಕಳುಹಿಸುತ್ತಾರೆ. ಆದರೆ ಈ ಯೂನಿವರ್ಸಿಟಿಗಳ ರೀತಿಯೇ ಬೇರೆ. ಅಗ್ರಿಕಲ್ಚರಲ್ ಸೈಂಟಿಸ್ಟ್‌ಗಳಿಗೆ ಎಷ್ಟು ಆದ್ಯತೆ ಕೊಡಬೇಕೋ ಅಷ್ಟು ಆದ್ಯತೆಯನ್ನು ನಮ್ಮ ರಾಜ್ಯದಲ್ಲಿ ಕೊಟ್ಟಿಲ್ಲ. ನಾನು ಈ ಸರ್ಕಾರ ಕೊಟ್ಟಿಲ್ಲ ಎಂದು ಹೇಳುತ್ತಿಲ್ಲ. ಮೊದಲಿನಿಂದಲೂ ಇದು ನಡೆದುಕೊಂಡು ಬಂದಿದೆ. ಪ್ರಧಾನಿ ರಾಜೀವ್ ಗಾಂಧಿಯವರು ವ್ಯವಸಾಯಕ್ಕೆ ವಿಶೇಷವಾದ ಆದ್ಯತೆ ಯನ್ನು ಕೊಟ್ಟಿದ್ದಾರೆ. ದಿವಂಗತ ಇಂದಿರಾಗಾಂಧಿಯವರೂ ಈ ದಿಸೆಯಲ್ಲಿ ಮಾತನಾಡಿದರು. ಆದರೆ ಇದನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸುವುದಕ್ಕೆ ಹೊರಟವರು ಎಂದರೆ ಮಾನ್ಯ ರಾಜೀವ್ ಗಾಂಧಿಯವರು, ಅವರನ್ನು ನಾವು ನೆನೆಯಬೇಕಾಗಿದೆ. ಇವೊತ್ತು ಕೇಂದ್ರ ಸರ್ಕಾರದ ಬಜೆಟ್ ನೋಡಿದರೆ, ಅಗ್ರಿಕಲ್ಚರಲ್ ಡೆವಲಪ್‌ಮೆಂಟ್, ಅಗ್ರಿಕಲ್ಚರಲ್ ರೀಸರ್ಚ್‌ಗೆ ವ್ಯವಸಾಯಕ್ಕೆ ಬೇಕಾಗುವಂಥ ಆಗು ಹೋಗುಗಳಿಗೆ, ಅವಶ್ಯಗಳನ್ನು ಪೂರೈಸುವುದಕ್ಕೆ ಹೇರಳವಾಗಿ ಹಣವನ್ನು ತೊಡಗಿಸಿದ್ದಾರೆ. ಅದೇನೇ ಇರಲಿ, ಮಾನ್ಯ ಸಭಾಧ್ಯಕ್ಷರೇ, ಇದು ಉಳಿದ ಯೂನಿವರ್ಸಿಟಿಗಳ ಹಾಗಲ್ಲ. ಇದು ಬುದ್ಧಿ ಜೀವಿಗಳನ್ನು ತಯಾರು ಮಾಡುವಂಥ ಸಂಸ್ಥೆ ಇದು. ಈ ಸಂಸ್ಥೆಯಲ್ಲಿರತಕ್ಕಂಥ ವಿದ್ಯಾರ್ಥಿಗಳು ರವೀಂದ್ರನಾಥ್ ಟಾಗೂರ್ ರೀತಿಯಲ್ಲಿ "Nature is mine world is mine book" ನಲ್ಲಿ ಹೇಳಿರುವ ಹಾಗೆ ಕೆಲಸ ಮಾಡಬೇಕಾಗಿದೆ. ಆಕಾಶ ಮತ್ತು ಭೂಮಿಯಲ್ಲಿ ಇರುವಂಥ ವಸ್ತುಗಳ ಬಗ್ಗೆ ಅವರ ಸಾಧನೆ. ನಮ್ಮ ದೇಶಕ್ಕೆ ಅವರು ಇದನ್ನು ಸಾಧನೆ ಮಾಡಿ ಕೊಟ್ಟಿದ್ದಾರೆ. ನಾವು ದೇಶದ ಅಭ್ಯುದಯವನ್ನು ಕಾಪಾಡಿಕೊಂಡು ಬರಬೇಕು. ಅದಕ್ಕಾಗಿ ಈ ವ್ಯವಸಾಯದಲ್ಲಿ ರೀಸರ್ಚ್ ಪದವಿಯನ್ನು ಇಂಥ ವರ್ಗದ ಜನರಿಗೆ ದೊರಕಿಸಿ ಕೊಡುವುದು ಬಹಳ ಮುಖ್ಯವಾದುದು ನಮ್ಮ ಧರ್ಮ. ಈ ಧರ್ಮವನ್ನು ಕಾಪಾಡಿಕೊಂಡು ಬರಬೇಕಾದರೆ, ಅವರ ಮನಸ್ಸು ದೇಶದ ಪ್ರಗತಿಯ ಕಡೆಗೆ ಇರಬೇಕು. ಆದುದರಿಂದ ಇದನ್ನು ಪಕ್ಷದ ವಿಷಯಕ್ಕಾಗಲಿ ಅಥವಾ ವೈಯಕ್ತಿಕ ರಾಜಕೀಯ ಕಾರಣಗಳಿಗಾಗಲಿ ಹೋಲಿಸದೆ ಮಾನ್ಯ ಮಂತ್ರಿಗಳು ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಕೊಡಬೇಕಾದ ಕೊಡುಗೆಯನ್ನು ಲೋಪದೋಷ ಇಲ್ಲದೇ ಇರುವ ರೀತಿಯಲ್ಲಿ ಕೊಡಬೇಕು ಈ ಬಗ್ಗೆ ಒಂದು ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡುವಾಗ ಅಗ್ರಿಕಲ್ಚರಲ್ ಯೂನಿವರ್ಸಿಟಿ ಎಸ್ಟಾಬ್ಲಿಷ್ ಮಾಡುವಾಗ, ಮತ್ತು ಅದಕ್ಕೆ ನೇಮಕಾತಿ ಮಾಡುವಾಗ ಉತ್ತಮ ದರ್ಜೆಯ ವೈಸ್ ಛಾನ್ಸಲರ್, ಇನ್ನು ಇತರ ಕೆಲಸಗಳಿಗೆ ಯೋಗ್ಯರಾದವರನ್ನು ನೇಮಿಸಬೇಕು. ಮಾನ್ಯ ಅಧ್ಯಕ್ಷರೇ, ಈ ಅಗ್ರಿಕಲ್ಚರಲ್ ಬಗ್ಗೆ ಅನೇಕ ಜನರು ಅನೇಕ ರೀತಿಯಲ್ಲಿ ಭಾವನೆ ಮಾಡಿಕೊಂಡಿರುತ್ತಾರೆ. ಅದು ತಪ್ಪು ಎಂದು ನನ್ನ ಭಾವನೆ. ಶ್ರೀಮಾನ್ ಪ್ರಕಾಶ್‌ರವರು ಉತ್ತರ ಕರ್ನಾಟಕದಿಂದ ಬಂದಂಥವರು, ವೈಸ್ ಛಾನ್ಸಲರ್ ಸಹ ಉತ್ತರ ಕರ್ನಾಟಕದವರೇ. ಬೆಂಗಳೂರಿನ ಹೆಬ್ಬಾಳ್‌ನಲ್ಲಿರುವ ಅಗ್ರಿಕಲ್ಚರಲ್ ಯೂನಿವರ್ಸಿಟಿಯನ್ನು ಮತ್ತು ಧಾರವಾಡದಲ್ಲಿರುವ ಯೂನಿವರ್ಸಿಟಿಯನ್ನು ಕಂಪೇರ್ ಮಾಡಿದರೆ ಧಾರವಾಡದ ಯೂನಿವರ್ಸಿಟಿ ಬಹಳ ಉತ್ತಮ ರೀತಿಯಲ್ಲಿ ಇದೆ. ಅಲ್ಲಿ ಆಡ್ಮಿನಿಸ್ಟ್ರೇಷನ್ ಒಂದು ಬಿಟ್ಟು ಉಳಿದೆಲ್ಲಾ ಅಂದರೆ ವ್ಯವಸಾಯದ ಸಂಶೋಧನೆಯೆಲ್ಲಾ ಚೆನ್ನಾಗಿ ನಡೆಯುತ್ತಾ ಇದೆ. ಸಾರ್ವಜನಿಕ

ರಲ್ಲಿಯೂ ಕೂಡ ಬಹಳ ಹಿಂದಿನಿಂದಲೂ ಇದರ ಬಗ್ಗೆ ಒಳ್ಳೆಯ ಅಭಿಪ್ರಾಯ ಇದೆ. ಇದಕ್ಕೆ ಖರ್ಚು ಮಾಡುವ ಹಣ ಬಹಳ ಯೋಗ್ಯವಾದುದು. ಎನ್ನುವ ಭಾವನೆ ಬಂದಿದೆ. ನಾನು ಮೊದಲೇ ಹೇಳಿದ ಹಾಗೆ ಬೆಂಗಳೂರಿನಲ್ಲಿ ಹೆಬ್ಬಾಳ್‌ನಲ್ಲಿರುವ ಯೂನಿವರ್ಸಿಟಿ ಮತ್ತು ಧಾರವಾಡದಲ್ಲಿರುವ ಯೂನಿವರ್ಸಿಟಿ ಈ ಎರಡನ್ನೂ ಕಂಪೇರ್ ಮಾಡಿದಲ್ಲಿ ಹೆಬ್ಬಾಳ್‌ನಲ್ಲಿರುವ ನ್ಯೂ ಅಗ್ರಿಕಲ್‌ಚರಲ್ ಯೂನಿವರ್ಸಿಟಿಗೆ ನೀವು ಹೆಚ್ಚಿನ ಪ್ರದೇಶ ಏನಂ ಕೊಟ್ಟಿದ್ದೀರಿ ಆದು ಅಷ್ಟು ಫಲವತ್ತಾಗಿಲ್ಲ. ನಮ್ಮ ಧಾರವಾಡದ ಯೂನಿವರ್ಸಿಟಿಗೆ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಐಸಿಆರ್ ಫಂಡ್ ಬರುತ್ತದೆ, ಮತ್ತು ಕೇಂದ್ರ ಸರ್ಕಾರದಿಂದ ಫಂಡ್ ಬರುತ್ತದೆ. ಏತಕ್ಕೆಂದರೆ ನಮ್ಮ ಭೂಮಿ ರಿಸರ್ಚ್‌ಗೆ ಬಹಳ ಹೆಸರುವಾಸಿಯಾದಂಥಾದ್ದಾಗಿದೆ. ಆಯಿಲ್ ಡೆವಲಪ್‌ಮೆಂಟ್‌ಗಾಗಲಿ, ಕಾಟನ್ ಡೆವಲಪ್‌ಮೆಂಟ್‌ಗಾಗಲಿ, ಲ್ಯಾಂಡ್ ಟು ಲ್ಯಾಂಡ್ ಪ್ರೋಗ್ರಾಂಗಾಗಲಿ, ಲ ಏಂತರ ರೂಪಾಯಿಗಳ ಹಣ ಕೊಡುತ್ತಾರೆ. ಹೀಗೆ ಹೇಳಿದ ಮಾತ್ರಕ್ಕೆ ಎಲ್ಲಾ ಹಣವನ್ನೂ ಕೂಡ ಒಂದೇ ಯೂನಿವರ್ಸಿಟಿಗೆ ಹಂಚಬೇಕೆಂ ಎಂದು ಹೇಳುವುದಿಲ್ಲ. ವಿದ್ಯಾರ್ಥಿಗಳನ್ನು ನೋಡಿಕೊಂಡು ಗ್ರಾಂಟ್ ಕೊಡಬೇಕು. ಅಲ್ಲದೆ ಇನ್ನೊಂದು ವಿಷಯ ಏನೆಂದರೆ ಪ್ರತಿಯೊಂದು ಭೂಮಿಯೂ ಸಹ ಅಗ್ರಿಕಲ್‌ಚರಲ್ ಯೂನಿವರ್ಸಿಟಿಗೆ ಹೊಂದಿಕೊಂಡಂತೆ ಇರಬೇಕು. ನಮ್ಮ ಕ್ಷೇತ್ರ ಏನು ಇದೆ ಅದು ಅಗ್ರಿಕಲ್‌ಚರಲ್ ಕ್ಷೇತ್ರ. ಈ ಕ್ಷೇತ್ರದಲ್ಲಿರುವ ಪ್ರತಿಯೊಬ್ಬರ ಮನೆಯೂ, ಪ್ರತಿಯೊಬ್ಬರ ಜಮೀನೂ ಈ ಅಗ್ರಿಕಲ್‌ಚರಲ್ ಯೂನಿವರ್ಸಿಟಿಗೆ ಅಫಿಲಿಯೇಷನ್ ಆಗಬೇಕು. ಈ ರೀತಿಯಾದ ಒಂದು ಧೋರಣೆ ನಮ್ಮಲ್ಲಿ ಆಗಬೇಕು. ಈಗ ಇದರ ಜೊತೆಗೆ, ಬೀದರ್, ಗುಲ್ಬರ್ಗ, ಬಿಜಾಪುರ, ರಾಯಚೂರು, ಬಳ್ಳಾರಿ, ಧಾರವಾಡ, ಕಾರವಾರ ಮತ್ತು ಬೆಳಗಾಂ ಅನ್ನು ಈ ಯೂನಿವರ್ಸಿಟಿಗೆ ಹೊಸ ಕ್ಷೇತ್ರಗಳನ್ನಾಗಿ ತಂದಿದ್ದಾರೆ. ಇದು ಬಹಳ ಶ್ಲಾಘನೀಯವಾದುದು. ಧಾರವಾಡ ಯೂನಿವರ್ಸಿಟಿ ಸಂಶೋಧನೆಯಲ್ಲಿ ಹೆಸರಂ ಪಡೆದಿದೆ. ಅದಕ್ಕೆ ಮುಂತುವರ್ಜಿಯಿಂದ ಕೆಲಸ ಮಾಡುವುದು ಬಹಳ ಮುಖ್ಯ. ಈಗ ರಾಯಚೂರಿನಲ್ಲಿ ಕೇಂದ್ರ ಸರ್ಕಾರಕ್ಕೆ ಸೇರಿದ ಒಂದು ಫಾರಂ ಇದೆ. ಈ ವಿಚಾರದಲ್ಲಿ ಬೂಟಾಸಿಂಗ್ ರವರ ಹತ್ತಿರ ನಾನು ಮಾತನಾಡಿದೆ. ಇದಂವರೆಗೆ ಅವರಿಂದ ನಿವಂಗೆ ಅಫಿಷಿಯಲ್ ಆಗಿ ಪತ್ರ ಬಂದಿದೆಯೋ ಏನೋ ನನಗೆ ಗೊತ್ತಿಲ್ಲ. ಕೇಂದ್ರ ಸರ್ಕಾರದ ಈ ಫಾರಂ ಜಾಗ ಏನು ಇದೆ ಅದು ಒಟ್ಟು 7½ ಸಾವಿರ ಎಕರೆ ಇದೆ ಅವರು ತಮ್ಮ ಉಪಯೋಗಕ್ಕೆ ಬೇಕಾದರೆ ೪೦೦-೫೦೦ ಎಕರೆ ಇಟ್ಟುಕೊಳ್ಳಿ. ಇನ್ನು ಉಳಿದ ೭ ಸಾವಿರ ಎಕರೆಯನ್ನು ಅವರು ಧಾರವಾಡ ಅಗ್ರಿಕಲ್‌ಚರಲ್ ಯೂನಿವರ್ಸಿಟಿಗೆ ಬಿಟ್ಟುಕೊಡುವುದಕ್ಕೆ ತಯಾರಾಗಿದ್ದಾರೆ. ಸರ್ಕಾರ ಇದರ ಬಗ್ಗೆ ನಿಜವಾಗಿಯೂ ಚಿಂತನೆ ಮಾಡುವುದಾದರೆ, ಅವರಿಗೆ ನಿಷ್ಪಕ್ಷಪಾತವಾದ ಭಾವನೆ ಇರುವುದಾದರೆ ಈ ಕೆಲಸ ನನಗೆ ಕೊಡುವ ಹಾಗೆ ಮಾಡಿ. ಆದ ಆಗುವುದಿಲ್ಲ ಎಂದರೆ ಧಾರವಾಡದಲ್ಲಿ ಫಾರೆಸ್ಟ್‌ಗೆ ಸೇರಿದ ೩-೪ ಸಾವಿರ ಎಕರೆ ಭೂಮಿ ಏನು ಇದೆ ಅದನ್ನಾದರೂ ಕೊಡಿ ಮಾನ್ಯ ಸಭಾಧ್ಯಕ್ಷರೂ ಸಹ ಆಸ್ತೆ ವಹಿಸಿದಂಥ ಜಾಗ ಇದಾಗಿದೆ. ಇದು ತಮಗೂ ಅತ್ಯಂತ ಅವಶ್ಯ ಎನ್ನುವುದು ಗೊತ್ತು. ಈ ೩-೪ ಸಾವಿರ ಎಕರೆ ಭೂಮಿಯನ್ನು ಯಾವುದೋ ಕಾರಣಕ್ಕಾಗಿ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಹಿಂದೆ ಇದನ್ನು ಲೀಸ್‌ಗೆ ಕೊಟ್ಟಿದ್ದರು. ಆದು ಕಂಸಿದು ಈಗ ಅವರೇ ಪುನಃ ವಾಪಸ್ಸು ತೆಗೆದುಕೊಂಡಿದ್ದಾರೆ. ಇವೆರಡನ್ನೂ ತಾವು ತುಲನೆ ಮಾಡಿ ನೋಡಿ ಈ ಯೂನಿವರ್ಸಿಟಿಗೆ ಯಾವ ಜಾಗವನ್ನಾದರೂ ಕೊಡಿಸಿಕೊಡಿ. ಇನ್ನೊಂದು ವಿಚಾರ ಏನೆಂದರೆ ಯಾವ ಯೂನಿವರ್ಸಿಟಿಯವರು ಆಸ್ತೆ ವಹಿಸಿ ಅಭಿವೃದ್ಧಿ ಮಾಡುತ್ತಾರೋ ಅವರಿಗೆ ಆ ಜಾಗವನ್ನು ಕೊಡಿ. ಯಾವ ಯೂನಿವರ್ಸಿಟಿಯವರು ಆಸ್ತೆ ವಹಿಸಿ ಅದನ್ನು ಡೆವಲಪ್‌ಮೆಂಟ್ ಮಾಡುವುದಿಲ್ಲವೋ ಅಂಥಾವರಿಗೆ ಭೂಮಿಯನ್ನು ಕೊಡುವುದನ್ನು ಬಂದ್ ಮಾಡಿ. ಧಾರವಾಡ ಯೂನಿವರ್ಸಿಟಿಗೆ ಕೇಂದ್ರ ಸರ್ಕಾರದವರು ಬೇಕಾದಷ್ಟು ಸಹಾಯ ಕೊಡುತ್ತಿದ್ದಾರೆ. ಧಾರವಾಡ ಯೂನಿವರ್ಸಿಟಿ ಇವೊತ್ತಿನ ದಿವಸ ಬಹಳ ಮಹತ್ವದ್ದಾಗಿದೆ, ಆದುದರಿಂದ ಧಾರವಾದ ಅಗ್ರಿಕಲ್‌ಚರಲ್ ಯೂನಿವರ್ಸಿಟಿಗೆ ತಾವು ಈ ಜಮೀನನ್ನು ಕೊಡುವುದಾದರೆ ಅದಕ್ಕೆ ಪರವಾನಗಿ ಕೊಡುವುದು ಅವಶ್ಯಕ. ನಾನು ಮೊದಲೇ ಹೇಳಿದ ಹಾಗೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಮೊದಲು ತಪ್ಪು ಮಾಡಿ ಆ ಜಾಗವನ್ನು ಲೀಸ್‌ಗೆ ಕೊಟ್ಟಿದ್ದರು, ಮತ್ತೆ ಅದನ್ನು ಅವರು ವಾಪಸ್ಸು ತೆಗೆದುಕೊಂಡು ಆ ಜಾಗವನ್ನು ರೆಸ್ಟೋರ್ ಮಾಡಿದ್ದಾರೆ. ಇನ್ನೊಂದು ವಿಷಯ ಏನೆಂದರೆ ಯಾವುದು ಸ್ವಾಯತ್ತತವಾದ ಸಂಸ್ಥೆ ಡೆವಲಪ್‌ಮೆಂಟ್ ಮಾಡುವುದಿಲ್ಲವೋ ಅದಕ್ಕೆ ಆ ಜಾಗವನ್ನೇ ಕೊಡುವುದು ಕಡಿಮೆ ಮಾಡಿ. ಯಾವ ಯೂನಿವರ್ಸಿಟಿ ಚೆನ್ನಾಗಿ ಡೆವಲಪ್‌ಮೆಂಟ್ ಮಾಡುತ್ತದೆಯೋ

ಅದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಿ. ಈ ಯೂನಿವರ್ಸಿಟಿಯಲ್ಲಿರತಕ್ಕಂಥವರು ನಮ್ಮ ವೈಸ್ ಛಾನ್ಸಲರ್, ಇವರು ನಮ್ಮ ನೌಕರರು ಎಂದು ಹೇಳಿ ಅವರ ಲೀಗಲಿಟಿಯನ್ನು ಕ್ಲೇಮ್ ಮಾಡುವುದಕ್ಕೆ ಹೋಗಬಾರದು. ತಮಗೆ ಹೇಳಬೇಕಾದರೆ ಹಿಂದೆ ಮಂತ್ರಿಗಳಾಗಿದ್ದ ಶ್ರೀ ರಾಮೇಗೌಡರು ಇದ್ದಾಗ ಇದರ ಬಗ್ಗೆ ಒಂದು ನೋಟಿಫಿಕೇಷನ್ ಹೊರಡಿಸಿದ್ದರು. ಅನಂತರ ಅದು ಇಲ್ಲೀಗಲ್ ನೋಟಿಫಿಕೇಷನ್ ಎಂದು ಆಗಿ ಮತ್ತೆ ಆ ನೋಟಿಫಿಕೇಷನ್ ಅನ್ನು ವಿತ್‌ಡ್ರಾ ಮಾಡಿದರು. ಆದುದರಿಂದ ಈಗ ಆ ಳ ಸಾವಿರ ಎಕರೆ ಜಮೀನು ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ವಶದಲ್ಲಿಯೇ ಇದೆ. ಈಗ ಧಾರವಾಡದಲ್ಲಿರುವ ಯೂನಿವರ್ಸಿಟಿ ಮತ್ತು ಕಾಲೇಜು ಚೆನ್ನಾಗಿ ನಡೆಯುತ್ತಾ ಇದೆ ಎನ್ನುವುದು ಎಲ್ಲರಿಗೂ ಗೊತ್ತು. ಈ ದೃಷ್ಟಿಯಿಂದ ಧಾರವಾಡದಲ್ಲಿ ಅಗ್ರಿಕಲ್‌ಚರಲ್ ಯೂನಿವರ್ಸಿಟಿ ಮಾಡುವುದಕ್ಕೆ ಯೋಗ್ಯವಾದುದಾಗಿದೆ ಎಂದು ನಾನು ಹೇಳುತ್ತೇನೆ. ಅಗ್ರಿಕಲ್‌ಚರಲ್ ಯೂನಿವರ್ಸಿಟಿ ಮಾಡುವುದಕ್ಕೆ ಯಾವುದು ಯೋಗ್ಯ ಇದೆಯೋ ಯಾವುದು ಯೋಗ್ಯ ಇಲ್ಲವೋ ಎಂದು ತಾವು ಸಹ ಚೆನ್ನಾಗಿ ಆಲೋಚನೆ ಮಾಡಿ. ಧಾರವಾಡದಲ್ಲಿಯೇ ಅಗ್ರಿಕಲ್‌ಚರಲ್ ಯೂನಿವರ್ಸಿಟಿ ಮಾಡುವುದು ಅವಶ್ಯಕ ಎಂದು ತಮಗೆ ಕಂಡು ಬಂದರೆ ಅಲ್ಲಿಗೆ ಹೆಚ್ಚು ಹಣ ಖರ್ಚು ಮಾಡುವುದಕ್ಕೆ ಆಲೋಚನೆ ಮಾಡಿ. ಈಗಾಗಲೇ ಹೆಬ್ಬಾಳ್ ಅಗ್ರಿಕಲ್‌ಚರಲ್ ಯೂನಿವರ್ಸಿಟಿಯಲ್ಲಿ ಡೈರಿ ಡೆವಲಪ್‌ಮೆಂಟ್, ಪೌಲ್ಟ್ರಿ ಡೆವಲಪ್‌ಮೆಂಟ್ ಬಗ್ಗೆ ಹೆಚ್ಚು ನಿಗಾ ಕೊಟ್ಟಿದೆ. ಅದಲ್ಲದೆ ಹಾರ್ಟಿಕಲ್‌ಚರ್‌ಗೂ ವಿಶೇಷವಾಗಿ ಗಮನ ಕೊಟ್ಟಿದೆ. ಆದರೆ ಹೆಬ್ಬಾಳ್‌ನಲ್ಲಿರುವ ಅಗ್ರಿಕಲ್‌ಚರಲ್ ಯೂನಿವರ್ಸಿಟಿಗೆ ಸರಿಯಾದ ಜಮೀನು ಕೊಟ್ಟಿಲ್ಲ. ದುರ್ದೈವದಿಂದ ಬೆಂಗಳೂರಿನಲ್ಲಿ ಇದಕ್ಕೆ ಅಂತಹ ಫಲವತ್ತಾದ ಭೂಮಿ ಇಲ್ಲದೇ ಇರುವುದರಿಂದ ಅವರಿಗೆ ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದೇ ಧಾರವಾಡದಲ್ಲಿ ನೋಡಿ. ಅದೇ ರಾಯಚೂರಿನಲ್ಲಿರುವ ಅಗ್ರಿಕಲ್‌ಚರಲ್ ಇಂಜನಿಯರಿಂಗ್ ಕಾಲೇಜು ನೋಡಿ. ಇಲ್ಲಿರುವ ಪ್ರದೇಶಕ್ಕೂ ಅಲ್ಲಿರುವ ಪ್ರದೇಶಕೂಡ ಯಾವ ರೀತಿ ಇದೆ ಎನ್ನುವುದನ್ನು ನೋಡಿ. ಅಲ್ಲಿ ಜಮೀನಿನಲ್ಲಿ ಉತ್ತಮವಾದ ಬೆಳೆಗಳನ್ನು ಮಾಡಬಹುದು. ಮುಂದೆ ಆ ಜಾಗ ನೀರಾವರಿ ಪ್ರದೇಶವಾದರೆ, ಕೃಷ್ಣಾ ವೇಲ್ಡಂಡೆ ಯೋಜನೆ, ಘಟಪ್ರಭಾ ಯೋಜನೆ, ಮಲಪ್ರಭಾ ಯೋಜನೆಗಳು ಆದರೆ ಆ ಪ್ರದೇಶ ಮತ್ತಷ್ಟು ಅಭಿವೃದ್ಧಿ ಹೊಂದಿ ಹಾರ್ಟಿಕಲ್‌ಚರ್‌ಗೆ, ಡ್ರೈಲ್ಯಾಂಡ್ ಫಾರ್ಮಿಂಗ್‌ನ್ನು ಮಾಡುವುದಕ್ಕೆ ಚೆನ್ನಾಗಿ ಆಗುತ್ತದೆ. ಅಷ್ಟೇ ಅಲ್ಲ ಅದು ನೀರಾವರಿ ಪ್ರದೇಶವಾದ ಮೇಲೆ ಅಲ್ಲಿ ರೀಸರ್ಚ್ ಮಾಡುವುದಕ್ಕೂ ಅವಕಾಶ ಇದೆ. ಇವೊತ್ತು ರೀಸರ್ಚ್ ಎಲ್ಲಿಯವರೆಗೆ ಹೋಗಿದೆ ಎಂದರೆ ಅಗ್ರಿಕಲ್‌ಚರಲ್ ಯೂನಿವರ್ಸಿಟಿ ಜೊತೆಗೆ ಅನೇಕ ಖಾಸಗೀ ಸಂಸ್ಥೆಗಳವರೂ ಸಹ ಈ ವಿಷಯದಲ್ಲಿ ಮುಂದೆ ಬರುತ್ತಿದ್ದಾರೆ.

ಇನ್ನೊಂದು ವಿಚಾರ ಏನೆಂದರೆ ಇವೊತ್ತು ಕೇಂದ್ರ ಸರ್ಕಾರದವರು ಲ್ಯಾಂಡ್ ಟು ಲ್ಯಾಂಡ್ ಪ್ರೋಗ್ರಾಂ ಎನ್ನುವುದನ್ನು ಇಟ್ಟಿದ್ದಾರೆ. ಅದರಂತೆಯೇ ಕೇಂದ್ರ ಸರ್ಕಾರದವರು ಒಂದು ಮನೆಗೆ ೫೦ ರೂಪಾಯಿಗಳಂತೆ ಮಿನಿಕಿಟ್ಸ್ ಕೊಟ್ಟು ವರ್ಷಕ್ಕೆ ಒಂದು ಸಾವಿರ ಜನರನ್ನು ಈ ಯೋಜನೆಯಲ್ಲಿ ಸೇರಿಸಿದ್ದಾರೆ. ಧಾರವಾಡ ಜಿಲ್ಲೆಯ ಹನುಮನಹಟ್ಟಿಯಲ್ಲಿ ಲ್ಯಾಂಡ್ ಟು ಲ್ಯಾಂಡ್ ಎನ್ನುವ ಪ್ರೋಗ್ರಾಂ ಅನ್ನು ತೆಗೆದುಕೊಂಡಿದ್ದಾರೆ. ನಾನು ಹೇಳುವುದೇನೆಂದರೆ ಕೇಂದ್ರ ಸರ್ಕಾರದವರು ಈ ಅಗ್ರಿಕಲ್‌ಚರಲ್ ಯೂನಿವರ್ಸಿಟಿಗೆ ಹೆಚ್ಚು ಪ್ರೋತ್ಸಾಹವನ್ನು ಏನಾ ಕೊಡುತ್ತಿದ್ದಾರೋ ಅದೇ ರೀತಿಯಾಗಿ ತಾವೂ ಸಹ ಪ್ರೋತ್ಸಾಹ ಕೊಡುವುದನ್ನು ಇನ್ನೂ ಹೆಚ್ಚು ಮಾಡಬೇಕು. ಪ್ರತಿಯೊಂದು ಜಿಲ್ಲೆಗೂ ಜಿಲ್ಲೆಗೊದರಂತೆ ಲ್ಯಾಂಡ್ ಟು ಲ್ಯಾಂಡ್ ಪ್ರೋಗ್ರಾಂ ಅನ್ನು ಡೆವಲಪ್‌ಮೆಂಟ್ ಮಾಡಬೇಕು ಎಂದು ಹೇಳುತ್ತೇನೆ. ಲ್ಯಾಂಡ್ ಟು ಲ್ಯಾಂಡ್ ಪ್ರೋಗ್ರಾಂ ಅನ್ನು ನಾನು ಮೊದಲೇ ಹೇಳಿದ ಹಾಗೆ ಹನುಮನಹಟ್ಟಿಯವರು ಮಾಡಿದ್ದಾರೆ, ಅವರಲ್ಲದೆ ಹುಲ್ಕೊಟಿ ಗ್ರಾಮ ಸೇವಾ ಸಂಘ ದವರೂ ಸಹ ಈ ಪ್ರೋಗ್ರಾಂ ಅನ್ನು ಚಾರಿ ಮಾಡಿದ್ದಾರೆ. ಅವರು ೫೦ ರೂಪಾಯಿಗಳ ಮಿನಿಕಿಟ್ಸ್ ಕೊಟ್ಟು ಕೆಲಸ ಮಾಡಿಸುತ್ತಾ ಇದ್ದಾರೆ. ಈಗಾಗಲೇ ಆ ಜನರು ಈ ದುಡ್ಡನ್ನು ತೆಗೆದುಕೊಂಡು ದುಡಿಮೆ ಮಾಡಲಿಕ್ಕೆ ಹತ್ತಿದ್ದಾರೆ. ದುರ್ದೈವದಿಂದ ನಮ್ಮಲ್ಲಿ ಏನಾಗಿದೆ ಎಂದರೆ ದುರಭಿಮಾನದಿಂದ ಐ.ಎ.ಎಸ್. ಕೇಡರ್‌ನವರನ್ನು ಬೆಳೆಸಿದ್ದಾರೆ, ಅವರು ಈ ಅಗ್ರಿಕಲ್‌ಚರಲ್ ಸೈಂಟಿಸ್ಟ್‌ನವರು ಒಂದು ಏನಾದರೂ ಇದರಲ್ಲಿ ಉತ್ತಮ ಕೆಲಸ ಮಾಡಿದರೆ ನಮಗೆಲ್ಲಿ ಕೊಡಲಿ ಪೆಟ್ಟು ಬೀಳುತ್ತದೆ ಎಂದು ಇವರ ಪ್ರಗತಿಯನ್ನು ಕಡಿವೆ ಮಾಡಲಿಕ್ಕೆ ಪ್ರಯತ್ನಿಸುತ್ತಾರೆ.

ಗಿ-೦೦ ಪಿ. ಎಂ.

ಶ್ರೀಮಾನ್ ಕಾತರ್ಕಿಯವರನ್ನು ನಾವು ನೆನಪಿಸಿಕೊಳ್ಳಬೇಕಂ ಅವರನ್ನು ವರಲಕ್ಷ್ಮಿಯು ತಂದೆ ಎನ್ನುವ ಪ್ರತೀತಿ ಇತ್ತು. ಅಂತಹ ವನುಷ್ಯ ನಿವೃತ್ತಿ ಹೊಂದಿದರು ಎರಡನೇಯದು ಅವರ ಸೇವೆಯನ್ನು ತೆಗೆದುಕೊಳ್ಳುತ್ತೇವೆಂದು ಅವರನ್ನು ನಮ್ಮ ಕಡೆ ಕೊಡಿಯೆಂದು ಕೇಳಿದರೆ ಕೊಡಲಿಲ್ಲ. ಡೆಪ್ಯೂಟೇಷನ್ ಮೇಲೆ ಅವರ ಸೇವೆಯನ್ನು ಕೊಡುವುದಕ್ಕೆ ಪರವಾನಗಿ ಕೊಡಲಿಲ್ಲ. ಅವರೂ ಆ ವನುಷ್ಯ ನೀತಿಯನ್ನು ಮತ್ತು ನ್ಯಾಯವನ್ನು ಮೀರಿ ಬರುವ ವನುಷ್ಯನಲ್ಲ ಅಂತಹ ವನುಷ್ಯನ ಬುದ್ಧಿವಂತಿಕೆಯನ್ನು ಕುಂಠಿತ ಮಾಡುವ ಕೆಲಸವನ್ನು ಯಾರೇ ಮಾಡಲಿ ಅದಂ ಅಮಾನುಷವಾದ ಕೃತ್ಯ ವೆಂದು ಹೇಳುತ್ತೇನೆ ವ್ಯವಸಾಯಗಾರರಿಗೆ ತೊಂದರೆಯಾಗತಕ್ಕ ಕೃತ್ಯ ಇದು ಏತಕೆದಂರೆ ಅವನ ಪ್ರಾವೀಣ್ಯತೆಯನ್ನು ಹತ್ತಿಯಲ್ಲಿ ಉಪಯೋಗಿಸಿದ್ದರೆ ಈ ದೇಶಕ್ಕೆ ಕೋಟ್ಯಾಂತರ ರೂಪಾಯಿಗಳು ಬರುತ್ತಿತ್ತು, ಈ ರಾಜ್ಯಕ್ಕೆ ಬರುತ್ತಿತ್ತು ಅವನ ಮುಖಾಂತರ ಈ ರಾಜ್ಯಕ್ಕೆ ಹೆಚ್ಚು ಹಣ ಬರುತ್ತಿತ್ತು. ಈ ಕೀರ್ತಿಯನ್ನು ಪಡೆಯಲಿಕ್ಕೆ ನಾವು ಫೇಲಾಗಿದ್ದೇವೆ, ಯಾರೇ ಆಗಲಿ ಇನ್ನು ಮುಂದೆ ನಮ್ಮ ವ್ಯವಸಾಯ ಸಚಿವರಿಗೆ ಹೇಳುತ್ತೇನೆ. ಅಂತಹ ತಜ್ಞರು ಎಲ್ಲೆಲ್ಲಿ ಇದ್ದಾರೆ ಅವರು ನಿವೃತ್ತಿ ಆಗಿದ್ದರೂ ಸಹಾ ಪರವಾಗಿಲ್ಲ ಯಾವ ಮೂಲೆಯಲ್ಲಿದ್ದರೂ. ಯಾವ ಸಮಾಜಕ್ಕೆ ಸೇರಿದ್ದರೂ, ಯಾವ ಜಾತಿಗೂ ಸೇರಿದ್ದರು ನೀವು ಅವರನ್ನು ಒಳತಂದು ಅವರ ಸೇವೆಯನ್ನು ಪಡೆದುಕೊಳ್ಳಬೇಕು ಅವರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ. ಅವರ ಕೆಲಸಕ್ಕೆ ಹಾನರರಿ ಆಗಿ ಆದರೂ ತೆಗೆದುಕೊಳ್ಳಲಿ ಇಲ್ಲದಿದ್ದರೆ ಅವರಿಗೆ ಸಂಬಳ ಆದರೂ ಕೊಡಿ ಅವರಿಗೆ ಹೆಚ್ಚು ಹಣ ಕೊಟ್ಟು ಉಪಯೋಗ ಮಾಡಿದ್ದಿದ್ದರೆ ಹೊಸದಾಗಿ ಗ್ರಾಜುಯೇಟ್ ಆದವರನ್ನು ತಯಾರು ಮಾಡಬೇಕು. ಮಾಡಬೇಕಾದರೆ ಇನ್ನೂ ೧೫ ವರ್ಷ ಬೇಕಾಗುತ್ತದೆ ೧೫ ವರ್ಷದೊಳಗೆ ನಮ್ಮ ಹಣೆ ಬರಹ ಏನಾಗುತ್ತದೆಯೋ ಎಂಬುದು ಗೊತ್ತಿಲ್ಲ. ಹರಿಯಾಣದಲ್ಲಿರುವ ಕೃಷಿ ವಿಶ್ವವಿದ್ಯಾನಿಲಯವನ್ನು ನೋಡಿದರೆ ಆಕಾಶದಲ್ಲಿರುವ ತಪೋವನ ಎನ್ನುವ ರೀತಿಯಲ್ಲಿ ಇದೆ. ಆ ಕೃಷಿ ವಿಶ್ವವಿದ್ಯಾನಿಲಯವನ್ನು ನೀವು ಪುಸ್ತಕದಲ್ಲಿ ನೋಡಿದರೆ ಅಷ್ಟು ರಮ್ಯವಾಗಿ ಕಾಣುತ್ತದೆ ನಿಜವಾಗಿಯೂ ಹರಿಯಾಣದಲ್ಲಿರುವ ವ್ಯವಸಾಯಗಾರರು ಪುಣ್ಯವಂತರು ಏನಿಸುತ್ತದೆ ಅಂತಹ ವಾತಾವರಣವನ್ನು ನಮ್ಮಲ್ಲಿ ತಾವು ನಿರ್ಮಾಣ ಮಾಡಬೇಕು. ಇವತ್ತು ಧಾರವಾಡದಲ್ಲಿ ಕೃಷಿ ಕಾಲೇಜು ಇಷ್ಟು ಬಲಾಢ್ಯವಾಗಿ ಬೆಳೆಯಬೇಕಾದರೆ ದಿವಂಗತ ಎಂ. ಪಿ. ಪಾಟೀಲರು, ಕೆ. ಎಚ್. ಪಾಟೀಲರು ಮತ್ತು ಅನೇಕ ಜನ ಕಾರಣರಾಗಿ ದುಡಿದರೆಂದು ತಿಳಿದುಕೊಂಡಿದ್ದೇನೆ ಶ್ರೀಮಾನ್ ಬಿ. ಆರ್. ತಂಬಾಕದವರು ಈ ಕೃಷಿ ಕಾಲೇಜನ್ನು ಪ್ರಾರಂಭ ಮಾಡಿದರು. ಇಂಥವರೆಲ್ಲರ ಅವಿಶ್ರಾಂತ ಶ್ರಮದ ಫಲವಾಗಿ ಇವತ್ತು ಕೃಷಿ ವಿಶ್ವವಿದ್ಯಾನಿಲಯ ತಲೆ ಎತ್ತಿ ನಿಂತಿದೆ ಅದಕ್ಕೆ ನ್ಯಾಯವಾದ ಬೆಲೆಯನ್ನು ದೊರಕುತ್ತದೆ. ಅದನ್ನು ನೋಡಿದರೆ ನನಗೆ ಬಹಳ ಸಂತೋಷವಾಗುತ್ತದೆ. ಈ ಬಿಲ್ಲನ್ನು ಹೃತ್ಪೂರ್ವಕವಾಗಿ ನಾವು ಸ್ವಾಗತ ಮಾಡುತ್ತೇವೆ ಬರೇ ಸ್ವಾಗತ ಮಾತ್ರ ಮಾಡುವುದಲ್ಲ ಈ ಬಿಲ್ ಅಲ್ಲಿ ಇಲ್ಲಿ ಉಳಿಯಬಾರದು ಇವತ್ತು ಸಾಯಂಕಾಲವೇ ಅದನ್ನು ರಾಜ್ಯಪಾಲರಿಗೆ ಕಳುಹಿಸುವ ಹಾಗೆ ಮಾಡಿ ನಾಳೆಯಿಂದಲೇ ಈ ಕೆಲಸ ಮಾಡುತ್ತೀರಿ ಎಂಬ ಭರವಸೆಯಿಂದ ಈ ಬಿಲ್ಲನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು.—ಮಾನ್ಯ ಬೆಲ್ಲದ್ ಅವರು ಧಾರವಾಡದವರು ನೀವು ಮಾತಾನಾಡಿ ನಿಮ್ಮ ಊರಿಗೆ ಆ ವಿಶ್ವವಿದ್ಯಾನಿಲಯ ಬರುತ್ತಿದೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೇ ಇವೊತ್ತಿನ ದಿವಸ ನಮ್ಮ ಕೃಷಿ ಮಂತ್ರಿಗಳು ಧಾರವಾಡದ ಕೃಷಿ ವಿಶ್ವವಿದ್ಯಾನಿಲಯವನ್ನು ಇದೇ ವರ್ಷದಿಂದ ಪ್ರಾರಂಭಿಸುತ್ತಿರುವುದರ ಬಿಲ್ಲನ್ನು ತಂದಿದ್ದಾರೆ ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಇದ್ದೇನೆ ಇದಕ್ಕೆ ಮುಖ್ಯವಾಗಿ ನಮ್ಮ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರನ್ನು ಮತ್ತು ಶ್ರೀಮಾನ್ ಎಂ. ಪಿ. ಪ್ರಕಾಶ್‌ರವರನ್ನು ಬಹಳಷ್ಟು ಹೊಗಳಬೇಕಾಗಿದೆ ಮತ್ತು ಬಹಳಷ್ಟು ಅಭಿನಂದಿಸಬೇಕಾಗಿದೆ ತಡಾಗಲೇ ಮಾನ್ಯ ಕೆ. ಹೆಚ್. ಪಾಟೀಲರು ಹೇಳಿದಂತೆ ಅವರೇ ಹಿಂದೆ ಈ ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಇದ್ದರು ಅವರು ಇದನ್ನು ಕೃಷಿ ಸಚಿವರಾಗಿದ್ದಾಗ ತೆಗೆದುಕೊಂಡು ಬಂದಿದ್ದರು ಯಾವುದೋ ದುರ್ದೈವದಿಂದ ಅದು ಇಲ್ಲಿಯವರೆವಿಗೂ ಹಾಗೆಯೇ ಉಳಿದುಕೊಂಡು ಬಂದಿತು. ದೇಶದ ದೃಷ್ಟಿಯಿಂದ, ರಾಷ್ಟ್ರದ ದೃಷ್ಟಿಯಿಂದ ಕೃಷಿ ವಿಶ್ವವಿದ್ಯಾನಿಲಯ ಆಗು

ವುದು ಬಹಳ ಅವಶ್ಯಕವಾಗಿದ್ದುದನ್ನು ಮನಗಂಡು ನಮ್ಮ ಮುಖ್ಯಮಂತ್ರಿಗಳು ಮತ್ತು ಎಂ. ಪಿ. ಪ್ರಕಾಶ್, ಕೃಷಿ ಮಂತ್ರಿಗಳು ಇದನ್ನು ತಂದಿದ್ದಾರೆ ಇದು ಬಹಳ ಸ್ತುತ್ಯಾರ್ಹವಾದ ಕೆಲಸ. ಇವತ್ತು ಅನೇಕ ವಿಶ್ವವಿದ್ಯಾನಿಲಯಗಳು ಡಿಗ್ರಿಗಳನ್ನು ಮಾತ್ರ ಕೊಡುತ್ತಾ ಇವೆ, ಪದವೀಧರರನ್ನಾಗಿ ಮಾಡುತ್ತಾ ಇವೆ. ಅವರೆಲ್ಲರನ್ನು ಪದವೀಧರರನ್ನಾಗಿ ಮಾಡುತ್ತಿರುವ ಎಲ್ಲಾ ವಿಶ್ವವಿದ್ಯಾನಿಲಯಗಳು ಕೇವಲ ಒಂದು ಕಾರಕೂನ ನೌಕರಿಯ ಅಭ್ಯರ್ಥಿಗಳನ್ನಾಗಿ ಮಾಡುತ್ತಿವೆ ಇದು ರಾಷ್ಟ್ರಕ್ಕೆ ಒಂದು ದೊಡ್ಡ ಹೊರೆಯಾಗಿದೆ ಅಂದರೆ ಅದು ಅನುತ್ಪಾದನೆಗೆ ಸಹಾಯಕ ಆಗುವ ಜನರನ್ನು ಉಳಿದ ವಿಶ್ವವಿದ್ಯಾನಿಲಯಗಳು ತಯಾರು ಮಾಡುತ್ತಿಲ್ಲ. ಕೆ. ಎಚ್. ಪಾಟೀಲರು ಹೇಳಿದಂತೆ ವಿಶ್ವವಿದ್ಯಾನಿಲಯದಲ್ಲಿ ಪದವೀಧರರು ತಯಾರಾಗಿ ಬರುತ್ತಾ ಇದ್ದಾರೆ. ಆದರೆ ಈ ಕೃಷಿ ವಿದ್ಯಾನಿಲಯ ರಾಷ್ಟ್ರಕ್ಕೆ ಸಮರ್ಪಣೆ ಮಾಡುವ ಜನರನ್ನು ಉತ್ಪಾದನೆ ಮಾಡುತ್ತದೆ ಇವತ್ತು ರಾಷ್ಟ್ರದಲ್ಲಿ ಶೇಕಡ ೭೦– ೦ ಜನ ಕೃಷಿಗೆ ಸಂಬಂಧಿಸಿದ ಪೂರಕ ಉದ್ಯೋಗಗಳ ಮೇಲೆ ಅವಲಂಭಿಸಿದ್ದಾರೆ. ಈ ಮನುಷ್ಯ ಶಕ್ತಿ ಏನು ಇದೆ ಈ ಶಕ್ತಿಯನ್ನೆಲ್ಲಾ ಈ ಕೃಷಿಗೆ ಉಪಯೋಗಿಸುವುದು ಬಹಳ ಅವಶ್ಯಕವಾಗಿದೆ ಸಂಶೋಧನೆಗೆ ಸಾಕಷ್ಟು ಕೆಲಸವನ್ನು ನಾವು ಮಾಡಬೇಕಾಗಿದೆ. ಕರ್ನಾಟಕದ ವಿಶ್ವವಿದ್ಯಾನಿಲಯಗಳಲ್ಲಿ ಏನೂ ಪ್ರಗತಿಯಾಗಿದೆ ಅದಕ್ಕಿಂತಲೂ ಹೆಚ್ಚಿನ ಪ್ರಗತಿ ಈ ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ಆಗುವ ಸಾಧ್ಯತೆ ಇದೆ. ಕರ್ನಾಟಕ ರಾಜ್ಯ ರಾಷ್ಟ್ರದಲ್ಲೇ ಬಹಳಷ್ಟು ಸಂಪನ್ಮೂಲಗಳನ್ನು ಪಡೆದಂತಹ ರಾಜ್ಯ ಅಲ್ಲಿ ಕೃಷಿ ಮತ್ತು ತೋಟಗಾರಿಕೆ, ಪಶುಸಂಗೋಪನೆ, ಕೋಳಿ ಸಾಕಣೆ, ಅರಣ್ಯ ರೇಷ್ಮೆ ಇವೆಲ್ಲಾವಕ್ಕೂ ಅನುಕೂಲತೆಯನ್ನು ಪಡೆದ ಪ್ರದೇಶ ಈ ರಾಜ್ಯ ಎಲ್ಲಾ ರಾಜ್ಯಕ್ಕಿಂತಲೂ ಅನೇಕ ನೈಸರ್ಗಿಕ ಸಂಪನ್ಮೂಲಗಳನ್ನು ಪಡೆದಿದೆ ಇವೊತ್ತು ಈ ಕೃಷಿ ವಿಶ್ವವಿದ್ಯಾನಿಲಯ ಎಲ್ಲಾ ಸಂಪನ್ಮೂಲಗಳನ್ನು ಸರಿಯಾಗಿ ಬೆಳೆಸಿಕೊಳ್ಳಲಿಕ್ಕೆ ಬಹಳ ಮಹತ್ತರವಾದ ಪಾತ್ರವನ್ನು ವಹಿಸುವಂತಹ ಕೆಲಸವನ್ನು ಈ ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಈಗಾಗಲೇ ಸಾಧ್ಯವಿದೆ ಏಕೆಂದರೆ ಉತ್ತರ ಕರ್ನಾಟಕ ಬಹಳಷ್ಟು ನೀರಾವರಿ ಇಲ್ಲದೆ ಇರುವಂತಹ ಪ್ರದೇಶ ಇದುವರೆವಿಗೂ ಬಿಜಾಪುರ, ಗುಲ್ಬರ್ಗ, ಬೀದರ್ ಇವೆಲ್ಲಾ ಬೆಳೆಯನ್ನು ಪಡೆಯದಿರುವ ಫಲವತ್ತಾದ ಭೂಮಿಯನ್ನು ಹೊಂದಿದೆ ಈಗ ಅಲ್ಲೆಲ್ಲಾ ನೀರಾವರಿ ಬರುತ್ತಾ ಇದೆ ಈ ಪ್ರದೇಶಗಳಲ್ಲಿ ಕೃಷಿ ವಿಶ್ವವಿದ್ಯಾನಿಲಯ ಬರುವುದರಿಂದ ಕೃಷಿಯ ಅನೇಕ ಹೊಸ ಸಂಶೋಧನೆಗಳ ಪ್ರಯೋಜನ ಈ ಜನರಿಗೆ ದೊರಕುವುದಕ್ಕೆ ಸಾಧ್ಯವಿದೆ. ಇದು ಕೇವಲ ರಾಜ್ಯದ ಆರ್ಥಿಕ ಬದಲಾವಣೆಯನ್ನು ಮಾಡುವುದು ಅಷ್ಟೇ ಅಲ್ಲ ಇಡೀ ರಾಷ್ಟ್ರದ ಆರ್ಥಿಕ ಬದಲಾವಣೆಯನ್ನು ಮಾಡುವುದಕ್ಕೆ, ಈ ಕೃಷಿ ವಿಶ್ವವಿದ್ಯಾನಿಲಯ ತನ್ನ ಕೊಡುಗೆಯನ್ನು ಕೊಡುವುದಕ್ಕೆ ಇವತ್ತು ಧಾರವಾಡದಲ್ಲಿ ಬರುತ್ತಿದೆ. ಇಂತಹ ಮಹತ್ತರವಾದ ಕೃಷಿ ವಿಶ್ವವಿದ್ಯಾನಿಲಯ ಧಾರವಾಡಕ್ಕೆ ಬಂದು ಅಲ್ಲಿಯ ಫಲವತ್ತಾದ ಭೂಮಿಯ ಮತ್ತು ಹವಾಮಾನದ ಪ್ರಯೋಜನವನ್ನು ಪಡೆದು ಇಡೀ ರಾಷ್ಟ್ರಕ್ಕೆ ತನ್ನ ಕೊಡುಗೆಯನ್ನು ಕೊಡುವುದಕ್ಕೆ ಬರುತ್ತಿರುವ ಈ ಕೃಷಿ ವಿಶ್ವವಿದ್ಯಾನಿಲಯವನ್ನು ನಾವು ತುಂಬು ಹೃದಯದಿಂದ ಸ್ವಾಗತಿಸುತ್ತೇವೆ. ಇದು ಇಡೀ ಜನ ಶಕ್ತಿಗೆ ಬಹಳ ದೊಡ್ಡ ಚೈತನ್ಯವನ್ನು ನೀಡುವಂತಹ ಕೃಷಿ ವಿಶ್ವವಿದ್ಯಾನಿಲಯವಾಗಿ ಬರುತ್ತಿದೆ. ತನ್ನ ಸ್ವತಂತ್ರವನ್ನು ಕಾಯ್ದಿಕೊಳ್ಳಲು ಸಾಕಷ್ಟು ಸಂಪನ್ಮೂಲಗಳ ಅವಶ್ಯಕತೆ ಅಲ್ಲಿ ಇದೆ ಇವೆಲ್ಲವನ್ನು ಕೋಡೀಕರಿಸುವಂತಹ ಕೆಲಸವನ್ನು ಮಾಡಬಹುದು. ಈ ಒಂದು ಕೃಷಿ ವಿಶ್ವವಿದ್ಯಾನಿಲಯವನ್ನು ಹಿಂದೆ ಶ್ರೀವಾಸ್ ಎಂ ಪಿ. ಪಾಟೀಲರು ಹಿರಿಯರು ಅವರು ಬೋಬಾಯಿ ಪ್ರೊವಿನ್ಸ್ ಇದ್ದಾಗಲೇ ಪ್ರಯತ್ನ ಮಾಡಿ ಇದನ್ನು ಮಾಡಬೇಕೆಂದು ನಿಶ್ಚಯಿಸಿದ್ದರು. ಆ ಹಿರಿಯರೆಲ್ಲಾರ ಮನಸ್ಸಿನಲ್ಲಿರುವ ಒಂದು ಕಳಕಳಿ ಚಿಂತನೆ ಇವೊತ್ತಿನ ದಿವಸ ಪರಿಹಾರವಾಯಿತು. ಅವರೆಲ್ಲರ ಉದ್ದೇಶಕ್ಕೆ ಅನುಗುಣವಾಗಿ ಇವತ್ತಿನ ದಿವಸ ಈ ಒಂದು ಕಾರ್ಯವನ್ನು ನಮ್ಮ ರಾಜ್ಯ ಸರ್ಕಾರ ಮಾಡಿದೆಯೆಂದರೆ ಬಹಳ ಸಂತೋಷ ಪಡುವಂತಹ ಕೆಲಸ. ಇದರ ಜೊತೆಗೆ ಈ ಕೃಷಿ ವಿಶ್ವವಿದ್ಯಾನಿಲಯಕ್ಕೆ ಒಳ್ಳೆಯ ಸಂಶೋಧಕರನ್ನು ಮತ್ತು ಒಳ್ಳೆಯ ಉಪಾಧ್ಯಾಯರನ್ನು ಅವರ ಅರ್ಹತೆಯ ಮೇಲೆ ತೆಗೆದು ಕೊಳ್ಳಬೇಕಾದುದು ಬಹಳ ಅವಶ್ಯಕತೆ ಇದೆ. ಇಂತಹ ವಿಶ್ವವಿದ್ಯಾನಿಲಯದಲ್ಲಾಗಲಿ, ಬೇರೆ ವಿಶ್ವವಿದ್ಯಾನಿಲಯದಲ್ಲಾಗಲಿ, ರಾಜಕೀಯದಿಂದ ಯಾರು ಯಾರನ್ನೋ ಅಲ್ಲಿ ಸೇರಿಸಿ ಆ ಸಂಸ್ಥೆಗಳನ್ನು ಹಾಳು ಮಾಡುವಂತಹ ಕೆಲಸಕ್ಕೆ ಹೋಗಬೇಡಿ. ಇಲ್ಲಿ ಅರ್ಹತೆವುಳ್ಳವರನ್ನು ಒಳ್ಳೆಯ ಪ್ರಜ್ಞರನ್ನು ನೇಮಕ ಮಾಡಬೇಕು. ಸಂಶೋಧಕರಿಗೆ ಹೆಚ್ಚು ಆದ್ಯತೆಯನ್ನು ಕೊಡಬೇಕು. ಇವರ ಸಂಶೋಧನೆಯಿಂದ ಇಡೀ ರಾಜ್ಯದ ಜನತೆಗೆ, ರಾಷ್ಟ್ರದ ಜನತೆಗೆ ಅಷ್ಟೆ ಅಲ್ಲ ಜಗತ್ತಿನ ಜನತೆಗೆ ಒಳ್ಳೆಯ ಕೊಡುಗೆಯನ್ನು ಕೊಡುವಂತಹ ಒಂದು ಅವಕಾಶವನ್ನು ಈ ಕೃಷಿ ವಿಶ್ವವಿದ್ಯಾನಿಲಯ ಮಾಡಬೇಕಾ

ಗಿದೆ. ಇದರ ಜೊತೆಗೆ ಈಗಾಗಲೇ ಕೆ. ಎಚ್. ಪಾಟೀಲ್‌ರು ಹೇಳಿದಂತೆ ಡಾ. ಕರ್ಜಗಿ ಅಂಥ ಅನೇಕ ಜನರು ಬಹಳ ದೊಡ್ಡ ಕೊಡುಗೆಯನ್ನು ತಮ್ಮ ಸಂಶೋಧನೆಯಿಂದ ಮಾಡಿದ್ದಾರೆ ಅಂತಹ ಅನೇಕ ಜನ ನಿವೃತ್ತಿ ಹೊಂದಿ ತಮ್ಮ ಮನೆಯಲ್ಲಿ ಇರಬಹುದು. ಅವರ ಪ್ರಗತಿ ಸೇವೆಯನ್ನು ಪರಿಗಣಿಸಿ ಇನ್ನು ಹೆಚ್ಚಿನ ಸಂಶೋಧನೆಗೆ ಅವರ ಸೇವೆಯನ್ನು ಒದಗಿಸಿಕೊಟ್ಟರೆ ಮುಂದಿನ ಜನಾಂಗಕ್ಕೆ ಒಳ್ಳೆಯದಾಗುತ್ತದೆ. ಇದನ್ನು ಕೃಷಿವಿಶ್ವವಿದ್ಯಾನಿಲಯಗಳು ಮಾಡಬೇಕು ಆದರ ಜೊತೆಗೆ ಅನೇಕ ಶ್ರೇಷ್ಠವಾದಂತಹ ಸಂಶೋಧಕರು ಈ ಭಾರತದಲ್ಲಿ ಈ ರಾಜ್ಯದಲ್ಲಿ ಅವಕಾಶವಿಲ್ಲದೆ ವಿದೇಶಗಳಲ್ಲಿ ಹೋಗಿ ಕೆಲಸ ಮಾಡುತ್ತಿದ್ದಾರೆ ಕರ್ನಾಟಕ ದಿಂದ ಹೋದಂತಹ ಅನೇಕ ಜನ ಕೃಷಿ ಪದವೀಧರ ಸಂಶೋಧಕರು ಇವೊತ್ತು ಬಹಳ ದೊಡ್ಡ ಕೆಲಸಗಳನ್ನು ಮಾಡಿದ್ದಾರೆ. ಮತ್ತು ಭಾರತದಿಂದ ಹೋದಂತಹ ಕೃಷಿ ಪದವೀಧರರು ಜಗತ್ತಿನಲ್ಲಿ ಬಹಳ ದೊಡ್ಡ ಸ್ಥಾನವನ್ನು ಪಡೆದಿದ್ದಾರೆ ಅಂತಹ ಸಂಶೋಧಕರನ್ನು ಸಹಿತ ನಾವು ಇಲ್ಲಿಗೆ ಕರೆಯಿಸಿಕೊಂಡು ಈ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಅವರಿಗೆ ಅವಕಾಶ ಕೊಡಬೇಕು. ಒಳ್ಳೆಯ ಸಂಶೋಧನೆಯನ್ನು ಮಾಡುವುದಕ್ಕೆ ಈ ಧಾರವಾಡದ ಕೃಷಿ ವಿಶ್ವವಿದ್ಯಾನಿಲಯಕ್ಕೆ ಬರುವಂತಹ ಭಾಗಗಳು ಎಷ್ಟೋ ಇವೆ. ಧಾರವಾಡ, ಗುಲ್ಬರ್ಗ, ಬಿಜಾಪುರ, ಬೆಳಗಾಂ, ರಾಯಚೂರು ಮತ್ತು ಬೀದರ್ ಬಳ್ಳಾರಿ ಈ ಪ್ರದೇಶಗಳಲ್ಲಿ ಈಗಿರುವ ಜನ ಸಂಪನ್ಮೂಲವನ್ನು ಸರಿಯಾಗಿ ಬಳಸಿಕೊಳ್ಳುವುದಕ್ಕೆ ಹಾಗೂ ಈಗಿರುವ ಭೂವಿಯ ಫಲವನ್ನು ಸರಿಯಾಗಿ ಬಳಸಿಕೊಳ್ಳುವುದಕ್ಕೆ ಮತ್ತೆ ಈಗಿರುವ ಸಂಶೋಧನೆಯ ಪ್ರಯೋಜನವನ್ನು ಇನ್ನೂ ಹೆಚ್ಚು ಬಳಸಿಕೊಳ್ಳುವುದಕ್ಕೆ ಈ ಜನರ ಸಹಕಾರವನ್ನು ನಾವು ಪಡೆಯಬೇಕಾಗಿದೆ. ಉತ್ತರ ಕರ್ನಾಟಕದ ಬಹುದಿನದ ಬೇಡಿಕೆ ಈ ಕೃಷಿ ವಿಶ್ವವಿದ್ಯಾನಿಲಯ ಎಂದೋ ಆಗಬೇಕಾಗಿತ್ತು. ಈ ಕೆಲಸವನ್ನು ನಮ್ಮ ಮುಖ್ಯಮಂತ್ರಿಗಳು ಮಾಡಿರುವುದಕ್ಕೆ ಅವರನ್ನು ತುಂಬು ಹೃದಯದಿಂದ ಅಭಿನಂದಿಸುತ್ತೇನೆ. ಈ ವಿಶ್ವವಿದ್ಯಾನಿಲಯವನ್ನು ಇದೇ ವರ್ಷದಿಂದ ಪ್ರಾರಂಭಿಸಿ ಈ ದೇಶದ ಬಹು ಜನತೆಯನ್ನು ಪ್ರಗತಿಪಥದಲ್ಲಿ ನಡೆಸುವ ಕೆಲಸವನ್ನು ಮಾಡುತ್ತದೆಂದು ಆಶಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ಯೂನಿವರ್ಸಿಟಿ ಅಮೆಂಡ್‌ಮೆಂಟ್ ಬಿಲ್ಲನ್ನು ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ಏನು ತಂದಿದ್ದಾರೆ ಇದರ ಬಗ್ಗೆ ಈಗಾಗಲೇ ನಮ್ಮ ಪಕ್ಷದಿಂದ ಹಾಗೂ ಬೇರೆ ಪಕ್ಷಗಳಿಂದ ಎಲ್ಲರೂ ಮಾತನಾಡಿದ್ದಾರೆ. ಆದರೆ ಈ ಒಂದು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರತಕ್ಕಂಥ ಉತ್ತರ ಕರ್ನಾಟಕದ ಹಲವಾರು ಭಾಗಗಳನ್ನು ಇನ್ನೂ ಹೆಚ್ಚಿನ ಬಲಾಢ್ಯವಾದಂಥ ವ್ಯವಸಾಯಕ್ಕೆ ಆಳವಡಿಸಬೇಕಾಗುತ್ತದೆ. ಇದರ ಬಗ್ಗೆ ನಾನಂ ಮಾನ್ಯ ಕೃಷಿ ಮಂತ್ರಿಗಳಿಗೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಈ ಯೂನಿವರ್ಸಿಟಿ ಮಾಡಿದರೆ ಸಾಲದು. ತಾವು ಆದಷ್ಟು ಬೇಗ ಪಕ್ಕದ ಮಹಾರಾಷ್ಟ್ರದಲ್ಲಿರತಕ್ಕಂಥ ರಾವುರ್ ವಿಶ್ವವಿದ್ಯಾನಿಲಯಕ್ಕೆ ಭೇಟಿ ಕೊಟ್ಟರೆ ಇನ್ನೂ ಮಾದರಿಯಾದಂಥ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲಿಕ್ಕೆ ಸದವಕಾಶ ಸಿಗುತ್ತದೆ. ಈ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಕಾರಣಕರ್ತರಾದಂಥ ಹಿರಿಯರಾದ ದಿವಂಗತ ಎಂ. ಪಿ. ಪಾಟೀಲರು ಆಗಿನ ಕಾಲದಲ್ಲಿ ನನ್ನ ಮತದಾರ ಕ್ಷೇತ್ರವನ್ನು ಪ್ರತಿನಿಧಿಸಿದಂತಹವರು. ಆಗಿನ ಬಾಂಬೆ ಸರ್ಕಾರದಲ್ಲಿ ಪೂನಾ ಮತ್ತು ಧಾರವಾಡದಲ್ಲಿ ಕಾಲೇಜನ್ನು ಸ್ಥಾಪನೆ ಮಾಡಲಿಕ್ಕೆ ಹೆಸರಾದಂಥ ವ್ಯಕ್ತಿ. ಅಂತಹ ಮಹನೀಯರ ಹೆಸರನ್ನು ಈ ವಿಶ್ವವಿದ್ಯಾನಿಲಯಕ್ಕೆ ಇಡಬೇಕು ಎಂದೂ ನಾನು ಸೂಚನೆ ಮಾಡಿದ್ದೆ. ಮಾನ್ಯ ಮಂತ್ರಿಗಳು ಈ ಸಲಹೆಯನ್ನು ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ. ಏಕೆಂದರೆ ಅವರು ಒಕ್ಕಲುತನ ಮನೆತನದಿಂದ ಬಂದಂಥ ವ್ಯಕ್ತಿಗಳಂ, ಅವರ ಹೆಸರನ್ನು ಈ ವಿಶ್ವವಿದ್ಯಾನಿಲಯಕ್ಕೆ ಇಟ್ಟರೆ ಸರಿಹೋಗುತ್ತದೆ ಎಂದು ನಾನು ಹೇಳುತ್ತಾ ಇದ್ದೇನೆ. ಇಂತಹ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡತಕ್ಕ ಸಂದರ್ಭ ಬಂದಾಗ ಹಲವಾರು ಮಹನೀಯರು ಸದನದಲ್ಲಿ ಮತ್ತು ಹೊರಗಡೆ ತಮ್ಮ ಮನವಿ ಸಲ್ಲಿಸಿದ್ದಾರೆ. ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೆ. ಉತ್ತರ ಕರ್ನಾಟಕದ ಕಬ್ಬು ಬೆಳೆಗಾರರಿಂದ ಪ್ರತಿಯೊಂದು ಟನ್ನಿಗೆ ೨ ರೂಪಾಯಿಯಂತೆ ಕಾಣಿಕೆಯನ್ನು ಸಂಗ್ರಹಣೆ ಮಾಡಿ ವಿಶ್ವವಿದ್ಯಾನಿಲಯದ ಫಂಡ್‌ಗೆ ಜಮಾ ಮಾಡಿ, ಕಬ್ಬಿನ ಸಂಶೋಧನಾ ಕೇಂದ್ರವನ್ನು ಸ್ಥಾಪನೆ ಮಾಡಬೇಕು ಎಂದು ಕೇಳಿದಾಗ ಈ ವಿಷಯದಲ್ಲಿ ಸರ್ಕಾರ ಹೆಜ್ಜೆ ಇಟ್ಟಿದೆ. ನನ್ನ ಸೂಚನೆಗೆ ಮನ್ನಣೆ ಕೊಟ್ಟು ಪ್ರತಿಯೊಂದು ಟನ್ನಿಗೆ ಒಂದು ರೂಪಾಯಿಯಂತೆ ವಂತಿಗೆಯನ್ನು ಈ ವಿಶ್ವವಿದ್ಯಾನಿಲಯಕ್ಕೆ ಕೊಡಲಿಕ್ಕೆ ಮುಂದಾಗಿದ್ದಾರೆ. ಈ ಒಂದು ವಿಶ್ವವಿದ್ಯಾನಿಲಯವನ್ನು ಮಾಡಿದರೆ ಸಾಲದು. ಮಹಾರಾಷ್ಟ್ರದಲ್ಲಿರತಕ್ಕ ಹಲವಾರು ಸ್ಥಳಗಳನ್ನು ತಾವು

ಸಂದರ್ಶಿಸಬೇಕು. ಕರ್ನಾಟಕ ನಿಸರ್ಗ ವ್ಯಾಪ್ತಿಯಲ್ಲಿ ವಂಂದೆ ಇರಬಹುದು. ಆದರೆ ಕೆಲವು ವಿಷಯಂಗಳಲ್ಲಿ ನಾವು ಇನ್ನೂ ಹಿಂದೆ ಇದ್ದೇವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮಹಾರಾಷ್ಟ್ರದಲ್ಲಿ ಒಕ್ಕಲುತನ ಕ್ಷೇತ್ರದಲ್ಲಿ ಅವರು ಮಾಡಿರುವ ಸಾಧನೆಯನ್ನು ನೋಡಿದರೆ ನಾವು ಇನ್ನೂ ಮಾಡಬೇಕಾಗುತ್ತದೆ ಎಂಬ ವಿಷಯವನ್ನು ತಮ್ಮ ಮುಖಾಂತರ ನಾನು ಹೇಳುತ್ತಾ ಇದ್ದೇನೆ. ಇದೇ ಸಂದರ್ಭದಲ್ಲಿ ಒಂದು ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಏನೆಂದರೆ, ದಿನನಿತ್ಯದ ಊಟದಲ್ಲಿ ಉಪಯೋಗ ಆಗತಕ್ಕ ಮೆಣಸಿನಕಾಯಿ ಬೆಳೆ ಇನ್ನೂ ತಮ್ಮ ಕಕ್ಷೆಗೆ ಸೇರಿಲ್ಲ. ಹಾರ್ಟಿಕಲ್ಚರ್ ಕಕ್ಷೆಗೆ ಸೇರಿದೆ. ಅದನ್ನೂ ಕೂಡ ತಮ್ಮ ಕಕ್ಷೆಗೆ ಸೇರಿಸಿಕೊಳ್ಳಬೇಕಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಧಾರವಾಡ, ಬಿಜಾಪುರ, ಬೆಳಗಾಂ ವ ಂತಾದ ಹಿಂದುಳಿದ ಪ್ರದೇಶದಲ್ಲಿ ಮೆಣಸಿನಕಾಯಿಯನ್ನು ಬೆಳೆಸುತ್ತಾ ಇದ್ದೇವೆ. ಇದು ಹಾರ್ಟಿಕಲ್ಚರ್‌ಗೆ ಸೇರಿರುವುದರಿಂದ ಸಂಶೋಧನೆ ಮಾಡಲಿಕ್ಕೆ ಸಾಧ್ಯವಾಗಿಲ್ಲ ಸಂಕೇಶ್ವರ ಮೆಣಸಿನಕಾಯಿ ಅಂದರೆ ಬಂಬೈ ಬಜಾರುಪೇಟೆಯಲ್ಲಿ ಹೆಸರಾಂತ ಕೃಷಿಯಲ್ಲಿಂತಕ್ಕಂಥ ಒಂದು ಬೆಳೆಯಾಗಿತ್ತು. ಇವೊತ್ತು ಅದು ಹಾರ್ಟಿಕಲ್ಚರ್‌ನಲ್ಲಿರುವುದರಿಂದ ಅದರಲ್ಲಿ ಸಂಶೋಧನೆ ಮಾಡಿ ಹೊಸ ಬೆಳೆಯನ್ನು ರೈತರಿಗೆ ಕೊಡಲಿಕ್ಕೆ ಆಗಿಲ್ಲ. ಈಗ ಹಲವಾರು ರೋಗಪೀಡಿತ ಬೆಳೆ ಇರುವುದರಿಂದ ಹೊಸ ಬೆಳೆಯನ್ನು ರೈತರಿಗೆ ಕೊಡದೇ ಹೋದರೆ ಕರ್ನಾಟಕದಲ್ಲಿ ಈ ಬೆಳೆ ನಾಶವಾಗುತ್ತದೆ ಎನ್ನುವ ಸಂಶಯ ಇರುವುದರಿಂದ ಮಾನ್ಯ ಮಂತ್ರಿಗಳ ಗಮನಕ್ಕೆ ಇದನ್ನು ತರುತ್ತಾ ಇದ್ದೇನೆ ಮುಖ್ಯವಾಗಿ ಉತ್ತರ ಕರ್ನಾಟದಲ್ಲಿ ಬೆಳೆಯತಕ್ಕದ್ದು ಹತ್ತಿ ಬೆಳೆ. ಮಾನ್ಯ ಕೆ. ಹೆಚ್. ಪಾಟೀಲರು ಇದರ ಬಗ್ಗೆ ಹೇಳಿದರು. ಹೊಸ ಬೆಳೆಯನ್ನು ಕೊಟ್ಟಿದ್ದೇವೆ. ಆದರೆ ದಿನನಿತ್ಯ ಇದೇ ಬೆಳೆಗೆ ಬೀಜ ಹಾಕಿದಾಗ ಬೆಳೆಯು ಉತ್ಪಾದನೆ ಕಡಿಮೆಯಾಗುತ್ತಿದೆ. ಆದುದರಿಂದ ಹೊಸ ಬೀಜವನ್ನು ಉತ್ಪಾದನೆ ಮಾಡತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ. ಈಗ ರಾಯಚೂರು ವಿಶ್ವವಿದ್ಯಾನಿಲಯದ ಕಕ್ಷೆಯಲ್ಲಿ ನೀರಾವರಿ ಪ್ರದೇಶ ಇದೆ. ಮಾನ್ಯ ಎಂ. ಪಿ. ಪ್ರಕಾಶ್‌ರವರು ಏನೇ ಕೆಲಸವಿದ್ದರೂ ಕೂಡ ಅದನ್ನು ಬದಿಗೊತ್ತಿ ಆ ಯೂನಿವರ್ಸಿಟಿಗೆ ಹೋಗಿ ಬರಬೇಕು. ಅಲ್ಲಿ ಕಬ್ಬಿನ ಬೆಳೆಯನ್ನು ಸಂಶೋಧನೆ ಮಾಡಿದ್ದಾರೆ, ಗ್ರೌಂಡ್‌ನೆಟ್‌ನಲ್ಲೂ ಹೊಸ ಬೀಜ ಬಂದಿದೆ. ನಮ್ಮ ಪ್ರದೇಶದ ಮಹಾರಾಷ್ಟ್ರದ ಪಕ್ಕದಲ್ಲಿ ಬರುವುದರಿಂದ ಕರ್ನಾಟಕದಲ್ಲಿ ನಾವು ಅದನ್ನು ಬೆಳೆಯುತ್ತಾ ಇಲ್ಲ. ಆದುದುಂದ ಹೊಸ ಬೀಜ ಮಾಡಿ ಹೆಚ್ಚು ಬೆಳೆಯಂತಕ್ಕ ಪ್ರಸಂಗವಿರುವುದರಿಂದ ಹೊಸ ತಳಿಯ ಬೀಜಗಳನ್ನು ಸಂಶೋಧನೆ ಮಾಡಿ ನಮ್ಮ ರೈತರಿಗೆ ಕೊಡ ಬೇಕಾಗುತ್ತದೆ. ನೀವು ಗಡಿ ಪ್ರದೇಶದಲ್ಲಿದ್ದೀರಿ ಎಂದು ಹೇಳಬಹುದು. ಆದರೆ ಅವರಿಗೂ ನಮಗೂ ಬಹಳ ಪೈತ್ಯಾಸವಿದೆ. ನಿಮ್ಮ ವ್ಯವಸಾಯ ಇಲಾಖೆಯಲ್ಲಿ ಸಿಬ್ಬಂದಿ ವರ್ಗ ಏನಿದೆ ಅವರನ್ನೂ ಕೂಡ ಈ ಕ್ಷೇತ್ರದಲ್ಲಿ ತಂದಿದ್ದಾರೆ ಇವೊತ್ತಿನದಿವಸ ರೈತರು ಸಾಮಾಜಿಕ ಆರ್ಥಿಕ ತೊಂದರೆಗೆ ಒಳಗಾಗಿದ್ದಾರೆ. ಅವರಿಗೆ ದಿನನಿತ್ಯದ ಜೀವನಕ್ಕೆ ಉಪಯೋಗವಾಗತಕ್ಕ ಸಂಶೋಧನೆ ಮಾಡಬೇಕಾಗಿದೆ. ಬರೀ ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ಮಾಡಿದರೆ ಸಾಲದು. ಇದರ ಜೊತೆಗೆ ದಿನನಿತ್ಯ ಬಳಕೆಗೆ ಬೇಕಾಗಿರತಕ್ಕ ಕೃಷಿ ಸಂಸ್ಕರಣಗಳ ಬಗ್ಗೆಯೂ ಸಂಶೋಧನೆ ಮಾಡಬೇಕು ಈ ಒಂದು ವಿಶ್ವವಿದ್ಯಾನಿಲಯ ಹೆಚ್ಚಿನ ಸಾಧನೆಯನ್ನು ಸಾಧಿಸಲಿ. ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಇಡೀ ದೇಶಕ್ಕೇ ಮಾದರಿಯಾದ ವಿಶ್ವವಿದ್ಯಾನಿಲಯವಾಗಲಿ, ಈ ಒಂದು ಸಂದರ್ಭದಲ್ಲಿ ಈ ಕೃಷಿ ವಿಶ್ವವಿದ್ಯಾನಿಲಯ ಉತ್ತರ ಕರ್ನಾಟಕ ಕ್ಷೇತ್ರದಲ್ಲಿ ಬರತಕ್ಕಂಥ ವಿದ್ಯಾರ್ಥಿ ಜೀವನಕ್ಕೆ ಪುಡುವಾಗಿರಲಿ ಎಂದು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ಮನವಿ ಮಾಡಿಕೊಂಡು, ಈ ಒಂದು ಸದವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ಈ ಕೃಷಿ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ವಿಧೇಯಕವನ್ನು ಈಗಾಗಲೇ ಮಾನ್ಯ ಸದಸ್ಯರುಗಳು ಅದರಲ್ಲೂ ಉತ್ತರ ಕರ್ನಾಟಕ ಭಾಗದ ಸದಸ್ಯರುಗಳು ಅದರಲ್ಲೂ ಧಾರವಾಡ ಭಾಗದ ಸದಸ್ಯರುಗಳು ಬಹಳ ಸಂತೋಷದಿಂದ ಸ್ವಾಗತಿಸಿದ್ದಾರೆ. ನನಗೆ ಗೊತ್ತಿದೆ, ಮಾನ್ಯ ಅಧ್ಯಕ್ಷರೆ, ತಮಗೂ ಕೂಡ ಇದು ಬಹಳ ಸಂತೋಷ ತಂದಿರತಕ್ಕ ವಿಧೇಯಕ. ನಾನು ನಮ್ಮ ಎಲ್ಲಾ ಸದಸ್ಯರ ಸಂತೋಷದಲ್ಲಿ ಭಾಗಿಯಾಗಿ ಈ ವಿಧೇಯಕವನ್ನು ಸ್ವಾಗತಿಸುವುದಲ್ಲದೆ ಈ ಸಂದರ್ಭದಲ್ಲಿ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ತಮ್ಮ ಅನುಮತಿಯನ್ನು ಬಯಸುತ್ತೇನೆ ಮಾನ್ಯ ಅಧ್ಯಕ್ಷರೆ, ನಿಮ್ಮ ಮೂಲ ವಿಧೇಯಕದಲ್ಲಿ ಈ ಕೃಷಿ ವಿಶ್ವವಿದ್ಯಾನಿಲಯ ಏನು ಕೆಲಸ ಮಾಡಬೇಕು, ಆದರ ಪವರ್ಸ್ ಏನು ಎಂದು ಹೇಳಿದ್ದಾರೆ. ಪವರ್ಸ್ ಎನ್ನುವುದಕ್ಕಿಂತ ಡ್ಯೂಟೀಸ್ ಎಂದು ಹಾಕಿದ್ದರೆ ಚೆನ್ನಾಗಿತ್ತು. ಪವರ್ಸ್‌ನಲ್ಲಿ ಈ ರೀತಿ ಹೇಳಿದ್ದಾರೆ.

> The University shall have the following powers viz., to provide for instruction in Agriculture, Horticulture, Veterinary and Animal Sciences, Dairying, Fisheries, Agricultural Engineering, Home Economics and other allied sciences and in such other branches of learning as the University may deem fit.,
> to make provison for research and dissemination of the findings of research and technical information through an extension education programme. "

ಮಾನ್ಯ ಸಭಾಧ್ಯಕ್ಷರೆ, ಈ ವಿಧೇಯಕದ ಪ್ರಕಾರ ಬೆಂಗಳೂರಿನಲ್ಲಿರತಕ್ಕಂಥ ಒಂದು ಕೃಷಿ ವಿಶ್ವವಿದ್ಯಾನಿಲಯವಲ್ಲದೆ ಧಾರವಾಡದಲ್ಲಿ ಮತ್ತೊಂದು ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆಯಾಗುತ್ತಿದೆ. ಇದು ಬಹಳ ಸಂತೋಷ. ಆದರೆ ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರತಕ್ಕಂಥ ಹಲವಾರು ವಿಷಯುಗಳೀನಿವೆ ಅವುಗಳ ಬಗ್ಗೆ ವ್ಯಾಪಕವಾದ ಅಧ್ಯಯನಕ್ಕೆ ಅಗತ್ಯವಾದಂಥ ಸಂಸ್ಥೆಗಳು ನಿರ್ಮಾಣವಾಗದೆ ಬರೀ ವಿಶ್ವವಿದ್ಯಾನಿಲಯ ಮಾತ್ರ ನಿರ್ಮಾಣವಾಗುವುದರಿಂದ ಈ ಉದ್ದೇಶ ಸಾರ್ಥಕವಾಗುವುದಿಲ್ಲ. ಇವೊತ್ತು ವಿಶ್ವವಿದ್ಯಾನಿಲಯಗಳು ಒಂದು ರೀತಿಯ ದಂತದ ಗೋಪುರಗಳಾಗಿ ಆದಕ್ಕೂ ಮತ್ತು ಜನ ಜೀವನಕ್ಕೂ ಸಂಬಂಧ ಬರದೆ ಆಥವಾ ಯಾವ ಯಾವ ವಿಷಯಗಳಲ್ಲಿ ನಮ್ಮ ದೇಶದಲ್ಲಿ ಜ್ಞಾನಪ್ರಸಾರ ಆಗಬೇಕು, ವಿಷಯ ಪ್ರಸಾರ ಆಗಬೇಕು ಆದರ ಅಗತ್ಯತೆಗಳನ್ನು ಪೂರೈಸದ ಕೇವಲ ಒಂದು ಹೆಡ್ ಕ್ವಾರ್ಟರ್ಸ್ ಸಂಸ್ಥೆಗಳಾಗಿ ಉಳಿದರೆ ಅದರಿಂದ ನಿರೀಕ್ಷಿಸಿದಂಥ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರೆ, ತಮಗೂ ಕೂಡ ಕೆಲವು ವಿಚಾರಗಳು ಈ ಸಂಬಂಧಪಟ್ಟ ಇಲಾಖೆಗಳನ್ನು ತಾವು ನಿರ್ವಹಿಸಿರುವುದರಿಂದ ಗೊತ್ತಿದೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಕೆಲವು ವಿಚಾರಗಳಲ್ಲಿ ಅಗತ್ಯವಾದಂಥ ಶಿಕ್ಷಣ ಸೌಲಭ್ಯ ಇಲ್ಲ. ನಾನು ಕೆಲವು ದಿವಸಗಳ ಹಿಂದೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಆ ಕಾಲದಲ್ಲಿ ವಿಧಾನಸಭೆ ಅಧಿವೇಶನ ಮುಂದೆ ಹೋಗಿದ್ದರಿಂದ, ಅದು ಅನ್‌ಸ್ಟಾರ್ಡ್ ಕ್ವೆಶ್ಚನ್ ಆಗಿ ಉತ್ತರ ಬಂತು. ನಾನು ಕೇಳಿದಂಥ ಪ್ರಶ್ನೆ. Is it not a fact that there has been a wide gap between the availability and requirement of Veterinary doctors and live stock inspectors ಎಂದು ಕೇಳಿದ್ದಕ್ಕೆ 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಎಷ್ಟೋ ವೆಟರ್ನರಿ ಆಸ್ಪತ್ರೆಗಳಿಗೆ ಡಾಕ್ಟರುಗಳ ಸಂಖ್ಯೆ ಇಲ್ಲದೇ ಇರುವುದರಿಂದ ಎಷ್ಟೋ ವರ್ಷಗಳಿಂದ ಇವು ಮಂಜೂರು ಆಗಿದ್ದರೂ ಈವರೆಗೂ ಪ್ರಯೋಜನ ಆಗಿಲ್ಲ ಎನ್ನುವುದು ತಮಗೂ ಗೊತ್ತಿದೆ. ಇತ್ತೀಚೆಗೆ ಲೈವ್ ಸ್ಟಾಕ್ ಇನ್ಸ್‌ಪೆಕ್ಟರ್ಸ್ ಸ್ವಲ್ಪ ಪ್ರಮಾಣದಲ್ಲಿ ಇಲಾಖೆಗೆ ಸಿಕ್ಕತಕ್ಕ ಪರಿಸ್ಥಿತಿ ನಿರ್ಮಾಣವಾಗಿದೆ, ಡೈರಿ ಸೈನ್ಸ್, ಹೈನುಗಾರಿಕೆ ವಿಚಾರದಲ್ಲಿ ಸಾಕಷ್ಟು ವಿಸ್ತೃತವಾದ, ವ್ಯಾಪಕವಾದ, ಯೋಜನೆಗಳನ್ನು ರಾಜ್ಯ ಸರ್ಕಾರ ಕೂಡ ಜಾರಿಗೆ ಕೊಡುತ್ತಿದೆ. ಕೇಂದ್ರ ಸರ್ಕಾರದ ಯೋಜನೆಗಳನ್ನು ಕೂಡ ಜಾರಿಗೆ ಕೊಡುತ್ತಿದೆ. ಇವತ್ತು ಸುಧಾರಿಸಿದ ತಳಿಗಳ ಪಸುಗಳನ್ನು ಸಾಕತಕ್ಕದ್ದಕ್ಕೆ ನಮ್ಮ ಆರ್ಥಿಕ ವ್ಯವಸ್ಥೆಯ ಪುನರ್‌ನಿರ್ಮಾಣದ ಬಗ್ಗೆ ಪ್ರಮುಖವಾದ ಅಂಶವನ್ನು ನಮ್ಮ ಯೋಜನೆಗಳಲ್ಲಿ ಆಳವಡಿಸಿದ್ದೀರಿ. ಇಂಥ ಸಂದರ್ಭಗಳಲ್ಲಿ ಡೈರಿಗೆ ಸಂಬಂಧಪಟ್ಟಂತೆ ಮತ್ತು ಈ ಪಶು ಸಾಗಾಣಿಕೆಗೆ ಸಂಬಂಧಪಟ್ಟಂತೆ ತಕ್ಷ ವೈದ್ಯರ, ತಂತ್ರಜ್ಞರ ಸೇವೆ ದೊರಕದೇ ಹೋದರೆ ಸರ್ಕಾರದ ಮೂಲಕ ಮಾಡತಕ್ಕ ಹಲವಾರು ಯೋಜನೆಗಳು ನಿಷ್ಫಲವಾಗುತ್ತವೆ. ಸ್ವಲ್ಪ ದಿವಸ ಹೋದ ಮೇಲೆ ಯಾವುದೋ ಉತ್ತಮ ತಳಿ ಹಸು ಸಾಕಿದಾಗ ಅದಕ್ಕೆ ಏನಾದರೂ ತೊಂದರೆ ಬಂದರೆ ತಕ್ಷಣ ಅದನ್ನು ನೋಡಲಿಕ್ಕೆ ಡಾಕ್ಟರುಗಳು ಇಲ್ಲದೇ ಹೋದರೆ ಅದನ್ನು ಎಷ್ಟು ದಿವಸ ಸಾಕಲಿಕ್ಕೆ ಸಾಧ್ಯ ಇರುತ್ತದೆ ? ಮತ್ತೆ ನಮಗೆ ಹಾಲು ಕೊಡಲ್ಲ, ಸಗಣಿಯನ್ನು ಹಾಕುವುದಿಲ್ಲ ಅಂಥ ತಳಿಗಳನ್ನು ನೋಡಿಕೊಳ್ಳತಕ್ಕ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಈ ವಿಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾ ಸಂಸ್ಥೆಗಳು ನಿರ್ಮಾಣವಾಗಬೇಕು. ನಮ್ಮ ರಾಜ್ಯದಲ್ಲಿ ಅಗತ್ಯಕ್ಕಿಂತಲೂ ಹೆಚ್ಚಾಗಿ ಇಂಜಿನಿಯರಿಂಗ್ ಮೆಡಿಕಲ್ ಬಿ. ಎಡ್. ಕಾಲೇಜುಗಳು ಬೇಕಾದ ಹಾಗೆ ನಡೆಯುತ್ತಾ ಬಂದಿವೆ. ನಮಗೆ ನಿಜವಾದ ಬಹಳದೊಡ್ಡ ರೀತಿಯಲ್ಲಿ ಸಹಾಯವಾಗತಕ್ಕ ಕ್ಷೇತ್ರವಾದ ಅನಿಮಲ್ ಸೈನ್ಸ್, ಡೈರಿಸೈನ್ಸ್ ಹಾರ್ಟಿಕಲ್ಚರ್ ಇವುಗಳ ಬಗ್ಗೆ ಎಷ್ಟು ಸಂಸ್ಥೆಗಳು ಇದೆ ? ವೆಟರ್ನರಿ ಕಾಲೇಜು ಒಂದು ಇತ್ತು. ಈಗ ಬೀದರ್‌ನಲ್ಲಿ ಒಂದು ಕಾಲೇಜು

ಮಾಡುತ್ತಿದ್ದೀರಿ ಅದು ಅರ್ಥಂಬರ್ಥ ಮಾಡಿದ್ದೀರೋ ಏನೋ ಗೊತ್ತಿಲ್ಲ. ಅದು ಸಮರ್ಪಕವಾಗಿ ಆಗಿಲ್ಲ. ನಿಜವಾಗಿ ಅದನ್ನು ಬಿಟ್ಟರೆ ಬೇರೆ ಕಡೆ ಇಲ್ಲ. ಹಾರ್ಟಿಕಲ್ಚರ್ ಬಗ್ಗೆ ಒಂದು ಕಾಲೇಜಿನ ಬ್ರಾಂಚ್ ಇದೆ. ಈ ಹಾರ್ಟಿಕಲ್ಚರ್ ಬಗ್ಗೆ ಸ್ಕೋಪ್ ಎಷ್ಟಿದೆ ಎಂದರೆ, ನಮ್ಮ ದೇಶದಲ್ಲಿ ಬೆಳೆಯತಕ್ಕ ಹೂವುಗಳನ್ನು ಸಮರ್ಪಕವಾಗಿ ಬೆಳೆದು ರಫ್ತು ಮಾಡುವುದಾದರೆ ಅದನ್ನೇ ಒಂದು ದೊಡ್ಡ ಉದ್ಯಮ ಮಾಡಬಹುದು. ೧೯೨೨ರಲ್ಲಿ ನಾನು ಅಮೆರಿಕಾ ದೇಶಕ್ಕೆ ಹೋಗಿದ್ದಾಗ ಆಶ್ಚರ್ಯವಾಯಿತು. ಒಂದು ತಣಿಗಲು ಹೂವಿನ ಮೊಗ್ಗಿಗೆ ಆವತ್ತಿನ ದಿವಸದ ಬೆಲೆ ಅಲ್ಲಿ ೭ ಡಾಲರ್ ಇತ್ತು. ಕೆಲವು ಕಡೆಗಳಲ್ಲಿ ಹೂವುಗಳನ್ನು ಏನು ಬೆಳೆಸುತ್ತಾರೆ ಅದಕ್ಕೆ ವಾಸನೆ ಇರುವುದಿಲ್ಲ, ತರಕಾರಿಗೆ ರುಚಿ ಇರುವುದಿಲ್ಲ ಅಂಥ ಪರಿಸ್ಥಿತಿ ಮುಂದುವರಿದ ರಾಜ್ಯಗಳಲ್ಲಿ ಬಂದಿದೆ. ಇವತ್ತು ನಮ್ಮ ಭೂಮಿಯಲ್ಲಿ ತರಕಾರಿ ರುಚಿ ಕೊಡುತ್ತದೆ, ಹೂವು ವಾಸನೆ ಕೊಡುತ್ತದೆ ಅದು ಈವರೆಗೂ ಉಳಿವ ಕೊಂಡು ಬಂದಿದೆ. ಆದ್ದರಿಂದ, ಇದರ ಬಗ್ಗೆ ಒಂದು ಇಂಡಸ್ಟ್ರಿ ಮಾಡಿ ಬೆಳೆಸಲಿಕ್ಕೆ ಸಾಧ್ಯ ಇದೆ. ಇದನ್ನು ಬಹಳ ದೊಡ್ಡ ರೀತಿಯಲ್ಲಿ ರಫ್ತು ಮಾಡಬಹುದು, ಅದನ್ನು ತಾವು ರಫ್ತು ಮಾಡಬೇಕೆಂದರೆ ಅದಕ್ಕೆ ಕೆಲವೊಂದು ತಾಂತ್ರಿಕವಾದ ಮಾಹಿತಿಗಳು ಬೇಕು. ಅದು ಇಲ್ಲಿ ದೊರಕುತ್ತಿಲ್ಲ. ಬೇಕಾದಷ್ಟು ಕಣಿಗಲು ಹೂವುಗಳು ರಸ್ತೆಯಲ್ಲಿ ಬಿದ್ದು ಹಾಳಾಗಿ ಹೋಗುತ್ತಿವೆ. ರಫ್ತು ಮಾಡಲಿಕ್ಕೆ ಬೇಕಾಗತಕ್ಕ ಜ್ಞಾನ ನಮ್ಮಲ್ಲಿ ಇಲ್ಲ, ಅದಕ್ಕೆ ಬೇಕಾಗತಕ್ಕ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಹೀಗೆ ತೆಗೆದುಕೊಂಡರೆ, ಅಗ್ರಿಕಲ್ಚರ್, ಹಾರ್ಟಿಕಲ್ಚರ್, ವೆಟರ್‌ನರಿ ಮತ್ತು ಡೈರಿ ಸೈನ್ಸ್ ಇದೆ ಈ ವಿಚಾರಗಳಲ್ಲಿ ಯುವಕರನ್ನು ತರಬೇತಿ ಮಾಡಲಿಕ್ಕೆ ಒಂದಂ ಅವಕಾಶ ಇದೆ, ಆದರೆ ಇದುವರೆಗೂ ಏನೂ ಈ ದಿಸೆಯಲ್ಲಿ ಆಗುತ್ತಿಲ್ಲ. ಖಾಸಗಿ ಸಂಸ್ಥೆಗಳು ಇದರ ಬಗ್ಗೆ ಬರುವ ಹಾಗೆ ಇಲ್ಲ. ಬೇರೆ ವಿಶ್ವವಿದ್ಯಾನಿಲಯಗಳ ಕಾಯಿದೆಯಲ್ಲಿ ಇದ್ದಂತೆ ಖಾಸಗಿ ಸಂಸ್ಥೆಗಳಿಗೆ ಅಫಿಲಿಯೇಟ್ ಮಾಡಲಿಕ್ಕೆ ಯಾವುದೂ ಇಲ್ಲ, ನಾನು ಇದರ ಬಗ್ಗೆ ಒಂದು ತಿದ್ದುಪಡಿಯನ್ನು ಕೊಟ್ಟಿದ್ದೆ, ತಾವು ಅದು ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ಹೇಳಿದಿರಿ, ಮತ್ತೆ ನಾನು ಹೊಸದಾಗಿ ಯೋಚನೆ ಮಾಡುವ ಪ್ರಸಂಗ ಬಂದಿದೆ. ಇದು ಖಾಸಗಿ ಸಂಸ್ಥೆಗಳಲ್ಲಿ ಬರಬೇಕೆಂದು ಮಾಡಿದರೆ ಮುಂದೆ ಇವು ಕ್ಯಾಪಿಟೇಷನ್ ಓರಿಯೆಂಟೆಡ್ ಸಂಸ್ಥೆಗಳಾಗಬಹುದು. ಇದರ ಬಗ್ಗೆ ತರಬೇತಿ ಕೊಡಬೇಕೆಂದರೆ, ಯಾವರೀತಿ ಫ್ಯಾಕಲ್ಟೀಸ್ ಇರಬೇಕಂ, ಬೋಧನಾ ಕ್ರಮ ಯಾವರೀತಿ ಇರಬೇಕು ಅದನ್ನೆಲ್ಲಾ ರೂಪಿಸಿಕೊಳ್ಳದೆ, ಇರುವಾಗ ಖಾಸಗಿ ಸಂಸ್ಥೆಗಳು ಬಂದರೆ ನಾನು ಈಗ ಏನು ತಿದ್ದುಪಡಿ ಸೂಚನೆ ಮಾಡಿದ್ದೆನೋ ಅದಕ್ಕೆ ತದ್ವಿರುದ್ಧವಾಗಿ ಆಗಬಹುದೆಂದು ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಇದ್ದೆ. ತಾವೇ ಇದು ವ್ಯಾಪ್ತಿಗೆ ಮಿಾರಿದೆ ಎಂದು ಹೇಳಿದಿರಿ, ಅದನ್ನು ಕೈಬಿಟ್ಟಿದ್ದೇನೆ. ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯಪಡಿಸಲಿಕ್ಕೆ ಬಯಸುತ್ತೇನೆ. ಪಂಖ್ಯಾವಾರಿ ವೆಟರ್ನರಿ ಮತ್ತು ಡೈರಿ ಸೈನ್ಸ್‌ನಲ್ಲಿ ಹಾರ್ಟಿಕಲ್ಚರ್‌ಗೆ ಸಂಬಂಧಪಟ್ಟ ಹಾಗೆ ವಿದ್ಯಾಸಂಸ್ಥೆಗಳು, ಕಾಲೇಜುಗಳೇ ಇರಬೇಕೆಂದು ಒತ್ತಾಯ ಅಲ್ಲ, ಕೃಷಿ ಶಾಲೆಗಳು ಆಗಬೇಕು, ನಾನಾ ರೀತಿಯಲ್ಲಿ ಐಟಿಐ ತರಹದಲ್ಲಿ, ಒಂದು ಟ್ರೇಡ್‌ನಲ್ಲಿ ಹಾರ್ಟಿಕಲ್ಚರ್‌ಗೆ ಸಂಬಂಧಪಟ್ಟ ಹಾಗೆ ಜ್ಞಾನವನ್ನು ಕೊಡತಕ್ಕ ತರಬೇತಿ ಸಂಸ್ಥೆಗಳು ಆಗಬೇಕು. ಇಂಥ ಸಂಸ್ಥೆಗಳನ್ನು ದೊಡ್ಡ ಪ್ರಮಾಣದಲ್ಲಿ ಹುಟ್ಟು ಹಾಕಿದರೆ ಮಾತ್ರ ವಿಶ್ವವಿದ್ಯಾನಿಲಯಗಳಿಂದ ಸಾರ್ಥಕತೆ ಬರುತ್ತದೆ. ಇಲ್ಲಿ ಒಂದು ಕಡೆ ರಿಸರ್ಚ್ ಮಾಡಿಕೊಂಡು ಮತ್ತೊಂದು ಕಡೆ ಅದು ಇಲಾಖೆಯವರ ಒಂದು ಮಟ್ಟದಲ್ಲಿ ಕಾರ್ಯಾಚರಣೆಯಲ್ಲಿದ್ದರೆ ನಮ್ಮ ಜನರು ಯಾವ ರೀತಿ ಇರುತ್ತಾರೆ ಅದೇ ಮಟ್ಟದಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ ಆದರಿಂದ ಪ್ರಯೋಜನವಾಗುವುದಿಲ್ಲ. ಇವತ್ತು ಸರ್ಕಾರದ ಇಲಾಖೆಯ ಕಾರ್ಯ ವೈಖರಿಯಿಂದ, ವಿಶ್ವವಿದ್ಯಾನಿಲಯಗಳಲ್ಲಿ ನಡೆಯತಕ್ಕ ಚಟುವಟಿಕೆಗಳಂ ಸಮಾನ್ವಯವಾಗಿ ಆದರ ಪ್ರಯೋಜನ ಜನರಿಗೆ ಸಿಕ್ಕುವಂತಾಗಬೇಕು. ಇವತ್ತು ಅಧ್ಯಕ್ಷರು ವಿಶ್ವವಿದ್ಯಾನಿಲಯವನ್ನು ಧಾರವಾಡಕ್ಕೆ ತೆಗೆದುಕೊಂಡಿದ್ದಾರೆ ಬಹಳ ಸಂತೋಷ ನಮ್ಮ ಕಡೆಯ ಸ್ಥಿತಿಯೂ ಸಹ ಅಧ್ಯಕ್ಷರಿಗೆ ಗೊತ್ತಿದೆ. ಈಗಂತೂ ಬೆಂಗಳೂರು ಯೂನಿವರ್ಸಿಟಿಯಂ ಭಾರ ಬಹಳ ಕಡಿಮೆಯಾಯಿತು. ಬೆಂಗಳೂರು ಅಗ್ರಿಕಲ್ಚರ್ ಯೂನಿವರ್ಸಿಟಿ ವ್ಯಾಪ್ತಿಯಿಂದ ಕೆಲವಾರು ಸಂಸ್ಥೆಗಳು ಹೊರಗಡೆ ಹೋಗುತ್ತವೆ ಮಾನ್ಯ ಅಧ್ಯಕ್ಷರು ವಿಶ್ವವಿದ್ಯಾನಿಲಯ ತೆಗೆದುಕೊಂಡ ಸಂತೋಷದ ಸಂದರ್ಭದಲ್ಲಿ ನಮಗೂ ಒಂದು ಕೊಡಿಸಬೇಕು.

ಅಧ್ಯಕ್ಷರು.—ತಮಗೆ ಸಹ್ಯಾದ್ರಿ ಆದರೆ ಅಷ್ಟೆ ಸಂತೋಷ.

ಶ್ರೀ ಕೆ. ಪೆಚ್. ಶ್ರೀನಿವಾಸ್.—ನಾನು ಶಿವಮೊಗ್ಗ ಅಗ್ರಿಕಲ್ಚರ್ ಕಾಲೇಜಿನ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಸರ್ಕಾರದ ಸಹಾನುಭೂತಿ ಇದೆ ಎಂದು ಹೇಳುತ್ತಾರೆ. ಸ್ವಲ್ಪ ಪ್ರಯತ್ನ ಮಾಡ ಬೇಕಾಗಿದೆ. ಈಗ ಬೆಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ನಾವು ಉಳಿದುಕೊಂಡಿದ್ದೇವೆ. ಬೆಂಗಳೂರು ವಿಶ್ವವಿದ್ಯಾನಿಲಯ ನಮ್ಮ ಕಡೆ ಗಮನಹರಿಸತಕ್ಕ ಅವಶ್ಯಕತೆ ಇದೆ. ಶಿವಮೊಗ್ಗದಲ್ಲಿ ಒಂದು ವೃವಸಾಯ ಕಾಲೇಜು ಮಾಡುವ ಬಗ್ಗೆ ವಂತ್ತು ಮಲೆನಾಡು ಭಾಗಕ್ಕೆ ಸಂಬಂಧಿಸಿದ ಹಾಗೆ ನಾನು ಹೇಳಿದ್ದೆ. ಈಗ ಬೀದರ್‌ನಲ್ಲಿ ಸ್ಥಾಪನೆ ಮಾಡಿದ್ದೀರಿ. ಮಲೆನಾಡು ಭಾಗಕ್ಕೆ ಸಂಬಂಧ ಪಟ್ಟ ಹಾಗೆ ವೆರ್ಟನರಿ, ಮತ್ತು ಡೈರಿ ಸೈನ್ಸ್ ಬಗ್ಗೆ ವಿದ್ಯಾ ಸಂಸ್ಥೆಗಳು ಆಗಬೇಕಾಗಿದೆ. ತಾವು ಎಲ್ಲಿ ಬೇಕಾದರೂ ಮಾಡಿ, ಸಾಗರ್‌ನಲ್ಲಿಯೇ ಮಾಡಬಹುದು. ಶರಾವತಿಯಿಂದ ಊರುಗಳು ಮುಳುಗಡೆಯಾಗಿ ದೊಡ್ಡ ಪ್ರವಾಣದಲ್ಲಿ ಗ್ರೇಜಿಂಗ್ ಫೀಲ್ಡ್ ಆಗಿ ಉಳಿದಿರತಕ್ಕ ವಿಪರ್ಯಾಸ ಪರಿಸ್ಥಿತಿ ಇದೆ. ಅದರ ಬಗ್ಗೆ ಅಲ್ಲಿ ಅಧ್ಯಯನ ಮಾಡಿದ್ದು, ಅದು ಸೂಕ್ತವಾದ ಜಾಗ ಎಂದು ಹೇಳಿದ್ದಾರೆ. ನಾನು ನಮ್ಮ ಕ್ಷೇತ್ರದಲ್ಲಿಯೇ ಆಗಬೇಕೆಂದು ಹೇಳುತ್ತಿಲ್ಲ. ಮಲೆನಾಡಿಗೆ ಸಂಬಂಧ ಪಟ್ಟ ಹಾಗೆ ಒಂದು ವೆಟರ್ನರಿ ಮತ್ತು ಡೈರಿ ಸೈನ್ಸ್ ಸಂಸ್ಥೆಗಳ ಬಗ್ಗೆ ನಮಗೆ ಕೊಡಬೇಕೆನ್ನುವುದು ಪರಿಶೀಲನೆಯಲ್ಲಿದೆ. ಈ ಎರಡನ್ನೂ ಸರ್ಕಾರ ಆನುಗ್ರಹಿಸಬೇಕೆಂದು ಹೇಳಿ ನಾನು ಈ ಮಸೂದೆಗೆ ಸ್ವಾಗತ ಬಯಸುತ್ತೇನೆ. ನೂತನವಾಗಿ ನಿರ್ಮಾಣಾವಾದಂಥ ಧಾರವಾಡದ ಕಾಲೇಜು ಮಾನ್ಯ ಕೆ. ಹೆಚ್. ಪಾಟೀಲರು ಹಾಗೂ ಹಿರಿಯರ ಸಹಕಾರದಿಂದ ಆಗಿನೆ ಇದು ಉಜ್ವಲ ಸಂಸ್ಥೆಯಾಗಲಿ ಎಂದು ಹಾರೈಸಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಂಗಿಸುತ್ತೇನೆ.

1-30 P.M.

† SRI MOHAMMED LAIQUDDIN (Bidar).—Mr. Speaker Sir, I welcome University of Agricultural Sciences (Amendment) Bill, 1986. It is a progressive enactment and I think, this Bill has been introduced in order to create the opportunities to the people of Northen Karnataka in the field of Agricultural education. As you will agree with me Sir, the mere passing of this Bill will not serve the purpose. The infrastructure, the funds and the required parabanalia are quite necessary for effective functioning of an Agricultural University. I hope, the government will provide all the facilities for running this University at Dharwad which is having jurisdiction over the districts of Belgaum, Bellary, Bidar, Bijapur, Dharwad, Gulbarga, Raichur and Uttar Kannada. So far as, Hyderabad-Karnataka area is concerned. I think, our area was totally neglected not only in the field of education but in many other aspects too. It is necessary to complete the irrigation projects like, Malaprabha, Ghatprabha and particularly, Karanja Project at Bidar at the earliest. The irrigation potentialities are there but they have not been properly exploited. Now, after the establishment of this Agricultural University at Dharwad, I am sure, the inbalance in the field of education, particularly, in the field of Horticulture, Agriculture, Dairy Farming and Animal Husbandary would be set-right. I would like the Government to bestow special attention on Hydrabad-Karnataka area which consists of Raichur, Gulburga and Bidar. Hitherto our area people were compelled to go to Usmania Univ—

sity, Auranaghad University and Bombay University since they were not having any encouragement in our own State. I would like to specifically congratulate through you Sir to Sri M.P. Prakash who took keen interest for the establishment of the Apricultural University at Dharwad and Vaterinary College at Bidar. The Veterinary College at Bidar is in the initial stage and the land required for the establishment of that college is not yet provided. I learnt that atleast 1500 acres of land is required. So far only 200 acres of land has been made available to the college. Similarly, the infrastructure and other facilities have not been provided to the extent they ought to have. I would like the Hon. Minister for Agriculture to pay special attention to the needs and necessities of the Veterinary college at Bidar. Sir, ours is a backward area and the students coming from our area should be given special attention and special concessions. Bidar, Gulbarga and Raichur are having greater potentialisties not only in Agriculture but in Horticulture, Dairy farming too. The establishment of this college will definitely boost the Horticulture, agriculture and dairy farming. Side by side I request that the Government should establish Agricultural Polytechnics, Agricultural Engineering Colleges and other institutions in order to impart proper knowledge to the people of the area of Bidar. I would also request that diploma courses in Dairy Farming should be introduced. I well-come this Bill and thank the Chair for having given me an opportunity to speak.

ಶ್ರೀ ಎಂ.ಪಿ. ಪ್ರಕಾಶ್ (ಪ್ರವಾಸಾಯ ಮಂತ್ರಿಗಳು) — ಸನ್ಮಾನ್ಯ ಅಧ್ಯಕ್ಷರೇ, ಕೃಷಿ ವಿಶ್ವವಿದ್ಯಾನಿಲಯ ತಿದ್ದುಪಡಿಗೆ ಸಂಬಂಧಪಟ್ಟಂತೆ, ಧಾರವಾಡ ನಗರದಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಸಂಬಂಧ ಪಟ್ಟಂತೆ ಮಾನ್ಯ ಸದಸ್ಯರು ಹೃತ್ಪೂರ್ವಕವಾಗಿ ಸ್ವಾಗತಿಸಿದ್ದಕ್ಕಾಗಿ ನಾನು ಸರ್ಕಾರದ ಪರವಾಗಿ ವಿಲ್ಲರಿಗೂ ಆತ್ಯಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ವಿಷಯವನ್ನು ಪ್ರಸ್ತಾಪ ಮಾಡುವಾಗ ಅನೇಕ ಹಿರಿಯ ಸದಸ್ಯರುಗಳು, ಅದರಲ್ಲಿಯೂ ಮಾನ್ಯ ಹಿರಿಯರಾದಂಥ ಕೆ.ಹೆಜ್. ಪಾಟೀಲರು ಈ ವಿಶ್ವವಿದ್ಯಾನಿಲಯಕ್ಕೆ ಸಂಸ್ಥೆಗಳನ್ನು ಹೇಗೆ ರೂಢಿಸಿಕೊಳ್ಳಬೇಕು ಎನ್ನುವಂಥ ವಿಚಾರಗಳ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅವು ಬಹಳ ಸ್ವಾಗತಾರ್ಹವಾಗಿರತಕ್ಕ ಸಲಹೆಗಳು. ಮೊದಲನೆಯದಾಗಿ ಜಪಣಗೆರೆಯಲ್ಲಿರತಕ್ಕ ೭೫೦ ಎಕರೆ ಜಮೀನನ್ನು ಮತ್ತು ಅಲ್ಲಿರತಕ್ಕ ಮಿಷನ್‌ಗಳನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಹೇಳಿದ್ದಾರೆ. ಅಲ್ಲಿರತಕ್ಕ ಫಾರಂನಿಂದ ಸುಮಾರು ೫೯-೬೦ ಲಕ್ಷ ರೂಪಾಯಿಗಳ ನಷ್ಟವಾಗುತ್ತಿದೆ. ಈ ವಿಚಾರದಲ್ಲಿ ಕೇಂದ್ರಸರ್ಕಾರದ ಸಚಿವರೊಂದಿಗೆ ಪ್ರಸ್ತಾಪ ಮಾಡಲಾಗಿದೆ. ಮಾನ್ಯ ಕೆ.ಹೆಜ್. ಪಾಟೀಲರು ಕೂಡ ಪತ್ರ ಬರೆದಿದ್ದಾರೆ. ಇಷ್ಟರಲ್ಲಿಯೇ ಒಂದು ನಿರ್ಧಾರ ತಗೆದು ಕೊಳ್ಳುವುದಾಗಿ ಬೂಟಾಸಿಂಗ್‌ರವರು ಮತ್ತು ಯೋಗೇಂದ್ರ ಮಕ್ವಾರವರು ಪತ್ರ ಬರೆದು ನನಗೆ ಉತ್ತರ ಕೊಟ್ಟಿದ್ದಾರೆ ಪುಂತ್ ನಗರದಲ್ಲಿ ವಿಶ್ವವಿದ್ಯಾನಿಲಯ ಆದಂತೆ, ಆಂತರಿಕ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದಕ್ಕೆ ಅಲ್ಲಿರತಕ್ಕ ಕೇಂದ್ರಸರ್ಕಾರದ ಫಾರಂ ದೊಡ್ಡ ಸಹಾಯ ಮತ್ತು ಕೊಡುಗೆಯನ್ನು ಕೊಡುವುದೆನ್ನುವುದು ನನ್ನ ಭಾವನೆ. ಶ್ರೀಮತಿ ನಾಗರತ್ನಮ್ಮನವರು ಈ ಇಲಾಖೆಯ ಬೇಡಿಕೆಯ ಸಂದರ್ಭದಲ್ಲಿ ಮಾತನಾಡುತ್ತಾ ಹಿಂದಿನ ಮಂತ್ರಿಯವರಾಗಿದ್ದ ಶ್ರೀಕರಯ್ಯನವರು ಕೃಷಿ ಫಾರಂಗಳ ಉತ್ಪನ್ನವನ್ನು ಲೆಕ್ಕಕ್ಕೆ ತಗೆದುಕೊಂಡು ವಿಶ್ವವಿದ್ಯಾನಿಲಯದವರು ಉಪಯೋಗಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಾಗುವುದೆಂದು ಅಭಿವಚನ

ಕೊಟ್ಟಿದ್ದರು ಅದನ್ನು ಸರಿಪಡಿಸಬೇಕೆಂದು ಹೇಳಿದ್ದಾರೆ. ಅದೂ ಕೂಡ ಸರ್ಕಾರದ ಗಮನದಲ್ಲಿದೆ. ಅಲ್ಲಿ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿ ಬರತಕ್ಕಂಥ ಸಂಶೋಧನಾ ಕೇಂದ್ರಗಳಿರಬಹುದು. ಅಥವಾ ಫಾರಂಗಳು ಇರಬಹುದು, ಅವುಗಳು ರೂಢಿಸಿರತಕ್ಕಂಥ ಸಂಪನ್ಮೂಲಗಳನ್ನು ಲೆಕ್ಕಕ್ಕೆ ಪರಿಗಣಿಸಿದರೆ ಅಭಿವೃದ್ಧಿ ಪಡಿಸುವುದಕ್ಕೆ ಸಹಾಯಕವಾಗುತ್ತದೆ ಎನ್ನುವ ವಿಚಾರ ಕೂಡ ಸರ್ಕಾರದ ಗಮನದಲ್ಲಿದೆ. ಮಾನ್ಯ ಕೆ.ಹೆಚ್. ಪಾಟೀಲರು ಮಾತನಾಡುತ್ತಾ ೪೫೦೦ ಎಕರೆ ಅರಣ್ಯ ಪ್ರದೇಶ ಬೇರೆ ಬೇರೆ ರಾಜಕೀಯ ಕಾರಣಕ್ಕಾಗಿ ವಾಪಸ್ಸು ತೆಗೆದುಕೊಂಡಿರುವಂಥಾದ್ದು ಏನಿದೆ, ಅದಕ್ಕೆ ಸಂಬಂಧಪಟ್ಟ ನಿಯಮವನ್ನು ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳುವುದಾದರೆ, ಕೇಂದ್ರ ಸರ್ಕಾರದ ಅನುಮತಿ ಪಡೆಯುವ ಅಗತ್ಯ ವಿಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ ಈ ವಿಚಾರದಲ್ಲಿ ಕೇಂದ್ರಸರ್ಕಾರಕ್ಕೆ ಎರಡು ಸಲಹ ಪತ್ರ ಬರೆಯಲಾಗಿದೆ. ಈ ವಿಚಾರದಲ್ಲಿ ಕೇಂದ್ರಸರ್ಕಾರ ಒಪ್ಪಿಗೆ ಕೊಡುವ ಸಾಧ್ಯತೆ ಇಲ್ಲದೇ ಇದ್ದರೂ ಕೂಡ ಕೃಷಿ ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಬರುವಂಥ ಅರಣ್ಯ ಪ್ರದೇಶದ ಜಮೀನನ್ನು ಮರಳಿ ಪಡೆಯುವುದರ ಬಗ್ಗೆ ಅಲ್ಲಿನ ಉಷ್ಣತ್ವಗಳನ್ನು ಸಂಶೋಧನೆ ಅಭಿವೃದ್ಧಿ ಪಡಿಸುವುದಕ್ಕೆ ಉಪ ಯೋಗಿಸುವುದರಿಂದ ಮೂರನೆಯ ಬಾರಿಗೆ ಪತ್ರ ಬರೆದಿದ್ದೇವೆ. ವಾಪಸ್ಸು ತೆಗೆದುಕೊಂಡಿರತಕ್ಕ ಆಜ್ಞೆಯನ್ನು ಅನೂರ್ಜಿತಗೊಳಿಸಿದರೆ ಕೆಲವು ಕಾನೂನಿನ ಅಡಚಣೆಗಳು ಬರುವ ಸಾಧ್ಯತೆ ಇದೆ. ಈ ವಿಚಾರದಲ್ಲಿ ಶ್ರೀಮಾನ್ ಕೆ.ಹೆಚ್. ಪಾಟೀಲರ ಸಲಹೆಯನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ಶ್ರೀ ಕೆ.ಹೆಚ್. ಪಾಟೀಲರು ಹೇಳಿದಂತೆ ಈ ನಾಲ್ಕು ಸಾವಿರ ಎಕರೆ ಜಮೀನನ್ನು ಕೃಷಿವಿಶ್ವವಿದ್ಯಾಲಯಕ್ಕೆ ಕೊಟ್ಟಿದ್ದನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಅದು ವಿಶ್ವವಿದ್ಯಾನಿಲಯಕ್ಕೆ ಅವಶ್ಯಕ. ಈಗ ಹೊಸ ಕೃಷಿ ವಿಶ್ವ ವಿದ್ಯಾನಿಲಯ ಪ್ರಾರಂಭವಾಗುತ್ತಿದೆ. ಅವರ ಸಲಹೆಯನ್ನು ರಾಜ್ಯ ಸರ್ಕಾರವೇ ಆಜ್ಞೆ ಮಾಡಿದೆ. ಪುನಃ ಆ ಜಮೀನನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕೊಡುವ ಬಗ್ಗೆ ಅಷ್ಟು ತೊಡಕು ಬರಲಿಕ್ಕಿಲ್ಲವೆಂದು ನಾನು ಭಾವಿಸುತ್ತೇನೆ. ಕೇಂದ್ರ ಸರ್ಕಾರ ತನ್ನ ಒಪ್ಪಿಗೆಯನ್ನು ಇದಕ್ಕೆ ಕೊಡುವಂತಹ ಅವಶ್ಯಕತೆ ಇಲ್ಲವೆಂದೂ ಮತ್ತು ಆದಷ್ಟು ಬೇಗ ಈ ಕಾನೂನನ್ನು ಜಾರಿಗೆ ತರಲಾಗುತ್ತದೆಂದೂ ನಾನು ಭಾವಿಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ಸಚಿವರು).—ಮಾನ್ಯ ಅಧ್ಯಕ್ಷರೇ ಈಗಾಗಲೇ ಹಿರಿಯರಾದ ಬೊಮ್ಮಾಯಿಯವರು ಹೇಳಿದಂತೆ, ಇದರ ಬಗ್ಗೆ ಕಾನೂನು ಇಲಾಖೆಯ ಸಲಹೆಯನ್ನು ಪಡೆಯುತ್ತಿದ್ದೇವೆ. ಅದರ ವಿವರಗಳನ್ನು ಇಲ್ಲಿ ಹೆಚ್ಚಾಗಿ ಪ್ರಸ್ತಾಪ ಮಾಡದೆ ಅದನ್ನು ಕೂಡ ಈ ದೃಷ್ಟಿಕೋನದಲ್ಲಿ ಇಟ್ಟುಕೊಳ್ಳುತ್ತೇವೆಂದು ಈ ಸದನಕ್ಕೆ ಅರಿಕೆ ಮಾಡಿಕೊಳ್ಳುತ್ತೇನೆ. ಜೊತೆಗೆ, ಶ್ರೀ ಕೆ.ಹೆಚ್. ಶ್ರೀನಿವಾಸ್ ರವರು ಒಂದು ತಿದ್ದುಪಡಿಯನ್ನು ಕಳುಹಿಸಿಕೊಟ್ಟರು. ಈ ವ್ಯಾಪ್ತಿಯಲ್ಲಿ ಆ ತಿದ್ದುಪಡಿ ಬರಲಾರದೆಂದು ಅವರಿಗೆ ಹೇಳಿದರು. ಹೆಚ್ಚಾಗಿ ಖಾಸಗಿಯವರು ಕೂಡ ಇಂತಹ ವಿಚಾರಗಳಲ್ಲಿ ಶಿಕ್ಷಣ ಕೊಡುವುದಕ್ಕೆ ಮುಂದೆ ಬಂದರೆ, ಇದಕ್ಕೆ ಸಂಬಂಧಪಟ್ಟ ಶಾಖೆ ಅಥವಾ ಕಾಲೇಜುಗಳನ್ನು ಏತಕ್ಕೆ ಸ್ಥಾಪಿಸಬಾರದೆಂದು ದೃಷ್ಟಿಕೋನವನ್ನು ಅವರಿಗೆ ಇಟ್ಟುಕೊಂಡಿದ್ದಾರೆ. ಅದರ ಬಗ್ಗೆ ಈಗಾಗಲೇ ನಮ್ಮ ವಿಶ್ವವಿದ್ಯಾನಿಯದಲ್ಲಿ ಸ್ಥಾಪಿಸಲಟ್ಟಿರತಕ್ಕಂತಹ ಕೆಲವು ಇಂಜಿನಿಯರಿಂಗ್, ಅಥವಾ ವೈದ್ಯಕೀಯ ಕಾಲೇಜುಗಳು ವ್ಯಾಪಾರಿ ಸಂಸ್ಥೆಗಳಾಗಿ ಪರಿವರ್ತನೆಗೊಂಡಿರುವುದರಿಂದ ಬಹಳ ಅನಾರೋಗ್ಯಕರವಾದ ರೀತಿಯಲ್ಲಿ ಈ ಸಂಸ್ಥೆಗಳೂ ಸ್ಥಾಪಿತವಾಗಿ, ನಾವು ಕೊಡತಕ್ಕಂತಹ ಶಿಕ್ಷಣ ಹಾಸ್ಯಾಸ್ಪದವಾಗುವ ಅಪಾಯಕರ ಮಟ್ಟಕ್ಕೆ ಬರುವುದನ್ನು ಕೂಡ ಅವರು ಗುರುತಿಸಿದ್ದಾರೆ. ಈ ಬಗ್ಗೆ ನಾವು ಈಗಾಗಲೇ ಈ ಸದನದಲ್ಲಿ ತಿದ್ದುಪಡಿಯನ್ನು ತಂದಿದ್ದೇವೆ. ಆದು ಈ ಸದನದಲ್ಲಿ ಅಂಗೀಕೃತವಾಗಿದೆ. ಆದ್ದರಿಂದ ಬೇರೆ ಖಾಸಗಿ ಶಿಕ್ಷಣ ಸಂಸ್ಥೆಗಳು ಯಾವ ವಿಚಾರದಲ್ಲಿ ತರಬೇತಿ ಮಂತ್ರ ಶಿಕ್ಷಣವನ್ನು ಕೊಡುತ್ತವೆ ಅದಕ್ಕೆ ಕೃಷಿ ವಿಶ್ವವಿದ್ಯಾನಿಲಯದ ಒಪ್ಪಿಗೆಯನ್ನು ಪಡೆಯದೇ ಸ್ಥಾಪನೆ ಮಾಡಲಿಕ್ಕೆ ಸಾಧ್ಯವಿಲ್ಲ ಎಂಬುದನ್ನು ಗಮನಿಸಿ, ಅನುಬಂಧಕ್ಕೆ ನಾವು ಈಗಲೇ ಒಂದು ತಿದ್ದುಪಡಿಯನ್ನು ತಂದೂ, ಅದು ಸದನದಲ್ಲಿ ಈಗಲೇ ಅಂಗೀಕೃತವಾಗಿರುವುದರಿಂದ, ಆ ವಿಚಾರವನ್ನು ಅಲ್ಲಿಗೆ ಕೈಬಿಡುವುದು ಸೂಕ್ತ ಎಂದು ನಾನು ಭಾವಿಸುತ್ತೇನೆ.

ಮಾನ್ಯ ಬೀದರ್‌ನ ಸದಸ್ಯರು ಮತ್ತು ಇನ್ನಿತರ ಸದಸ್ಯರು ಈ ಬಗ್ಗೆ ಕೊಟ್ಟಿರತಕ್ಕಂತಹ ಸಲಹೆ ಗಳನ್ನು ನಾವು ಪರಿಶೀಲನೆ ಮಾಡುತ್ತೇವೆ. ಇಲ್ಲಿರುವ ಸಂಪನ್ಮೂಲಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಇಲ್ಲಿರುವ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುತ್ತೇವೆಂದು ಹೇಳುತ್ತಾ,

ಈ ಸದನದಲ್ಲಿನ ಸದಸ್ಯರಾಗಿರತಕ್ಕಂತಹ ಮಾನ್ಯ ಕೆ. ಹೆಚ್. ಪಾಟೀಲ್ ಮತ್ತು ವಿರೋಧ ಪಕ್ಷದ ನಾಯಕರು, ಎಲ್ಲರೂ ಕೂಡ ಈ ವಿಶ್ವವಿದ್ಯಾನಿಯದ ಆನಂದಾನದ ಸಮಿತಿಯು ಒಪ್ಪಿಗೆ ಕೊಡುವ ವಿಷಯದಲ್ಲಿ ಅವರು ಸಹ ತಮ್ಮ ಪ್ರಭಾವವನ್ನು ಉಪಯೋಗಿಸಬಹುದೆಂದು ಹೇಳಿ, ತಮ್ಮ ಮೂಲಕ ಅವರಿಗೆ ನಾನು, ಅವರು ಇದನ್ನು ಸ್ವಾಗತಿಸಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

ಅಧ್ಯಕ್ಷರು —ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

''೧೯೮೬ನೇ ಕೃಷಿ ವಿಶ್ವವಿದ್ಯಾನಿಲಯದ ವಿಧೇಯಕವನ್ನು ಪರಿಶೀಲಿಸುವುದು''.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

ಈಗ ವಿಧೇಯಕವನ್ನು ಖಂಡಖಂಡವಾಗಿ ಮತಕ್ಕೆ ಹಾಕುತ್ತೇನೆ.

ಖಂಡ ೨–೧೪

ಅಧ್ಯಕ್ಷರು.—

''೨ ರಿಂದ ೧೪ನೇ ಖಂಡಗಳು ವಿಧೇಯಕದ ಅಂಗವಾಗಿರಬೇಕು.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಖಂಡ ೨ ರಿಂದ ೧೪ರವರೆಗೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಪ್ರಥಮ ಖಂಡ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ—

ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರತ್ತದೆ.

(ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು ಮತ್ತು ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಇತ್ಯಾದಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅಂಗೀಕಾರ ಪ್ರಸ್ತಾವ

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಈಗ ಪ್ರಸ್ತಾವವನ್ನು ಅಂಗೀಕರಿಸಲು ಮಂಡಿಸುವುದು.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೆ, ನಾನು ''ಕೃಷಿ ವಿಶ್ವವಿದ್ಯಾನಿಲಯದ (ತಿದ್ದುಪಡಿ) ವಿಧೇಯಕ ೧೯೮೬ನ್ನು ಅಂಗೀಕರಿಸಬೇಕೆಂದು ತಮ್ಮನ್ನು ಪ್ರಾರ್ಥಿಸುತ್ತಿದ್ದೇನೆ.

ಅಧ್ಯಕ್ಷರು.—ಪ್ರಸ್ತಾವವನ್ನು ಮಂಡಿಸಲಾಗಿದೆ.

''೧೯೮೬ನೇ ಕೃಷಿ ವಿಶ್ವವಿದ್ಯಾನಿಲಯದ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''.
(ಪ್ರಸ್ತಾವವು ಅಂಗೀಕೃತವಾಯಿತು. ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿತು)

1986ನೇ ಇಸವಿಯ ಕರ್ನಾಟಕ ಹತ್ತಿ ಬೀಜ ಒತ್ತುವ ಮತ್ತು ತೆಗೆಯುವ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೆ, ''೧೯೮೬ನೇ ಇಸವಿಯ ಹತ್ತಿ ಬೀಜ ಒತ್ತುವ ಮತ್ತು ತೆಗೆಯುವ ಕರ್ನಾಟಕ ತಿದ್ದುಪಡಿಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು'' ನಾನು ಪ್ರಾರ್ಥಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು